ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

02 ಆಗಸ್ಟ್, 2026 ಭಾನುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 142 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಗ್ಲಾಸ್ಗೊದಲ್ಲಿ ನಡೆಯುತ್ತಿರುವ ಕಾಮನ್ ವೆಲ್ತ್ ಕ್ರೀಡಾಕೂಟದ ಡೆಕಥ್ಲಾನ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.



ಸ್ವಾಮಿ ವಿವೇಕಾನಂದರ ಸಂಕಲ್ಪ ಭೂಮಿ » 2


ಕಾಮನ್‌ವೆಲ್ತ್ ಕ್ರೀಡೆ: ಬಾಕ್ಸಿಂಗ್‌ನಲ್ಲಿ ಭಾರತಕ್ಕೆ 2 ಚಿನ್ನ » 3


ಅಕ್ರಮ, ಪಕ್ಷಪಾತವಿಲ್ಲದೆ ಅರ್ಹರಿಗೆ ನಿವೇಶನ ಹಂಚಿಕೆ » 4


# ವಿವೇಕಾನಂದರ ಕನಸಿನ ಭಾರತಕ್ಕೆ ಕೈಜೋಡಿಸಿ

## ಯುವಜನರ ಹೊಣೆಗಾರಿಕೆ ಪ್ರಸ್ತಾಪಿಸಿದ ಪ್ರಧಾನಿ | ವಿವೇಕ ಸ್ಮಾರಕ ಉದ್ಘಾಟನೆ

• ಪ್ರಜೋದಯ ವರದಿ



**ಮೈಸೂರು:** ಸ್ವಾಮಿ ವಿವೇಕಾನಂದರು ಕಂಡ ಭಾರತದ ಕನಸನ್ನು ಸಾಕಾರಗೊಳಿಸುವ ಹೊಣೆ ಇಂದಿನ ಯುವಜನರ ಮೇಲಿದೆ. ಉತ್ಪಾದನೆ, ತಂತ್ರಜ್ಞಾನ, ಸ್ಟಾರ್ಟ್‌ಅಪ್, ಅಂತರಿಕ್ಷ, ಕ್ರೀಡೆ ಸೇರಿ ಎಲ್ಲಾ ಕ್ಷೇತ್ರಗಳಲ್ಲೂ ಯುವಕರ ಸಾಧನೆಯೇ ಭಾರತವನ್ನು ವಿಶ್ವದ ಮುಂಚೂಣಿಗೆ ಕೊಂಡೊಯ್ಯುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದರು.

ನಗರದ ಶ್ರೀರಾಮಕೃಷ್ಣ ಆಶ್ರಮದಲ್ಲಿ ನಿರ್ಮಿಸಲಾದ ವಿವೇಕ ಸ್ಮಾರಕವನ್ನು ಶನಿವಾರ ಉದ್ಘಾಟಿಸಿ ಮಾತನಾಡಿದ ಅವರು, ಸ್ವಾಮಿ ವಿವೇಕಾನಂದರು ವಿಶ್ವಪರ್ಯಟನೆ ವೇಳೆ ವಿದೇಶಗಳ ಯುವಕರು ತಮ್ಮ ದೇಶದ ಅಭಿವೃದ್ಧಿಗೆ ಶ್ರಮಿಸುತ್ತಿರುವುದನ್ನು ಕಂಡಿದ್ದರು. ಅಂದು ಭಾರತ ಗುಲಾಮಗಿರಿಯಲ್ಲಿತ್ತು. ಆದರೆ ಇಂದು ಭಾರತದ ಯುವಕರು ತಮ್ಮ ಪ್ರತಿಭೆ ಮತ್ತು ಪರಿಶ್ರಮ ದಿಂದ ದೇಶವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುತ್ತಿದ್ದಾರೆಂದರು.

ಭಾರತ ಈಗ ವಿಶ್ವದಲ್ಲಿ ಮೊಬೈಲ್ ಉತ್ಪಾದನೆಯಲ್ಲಿ ಎರಡನೇ ಸ್ಥಾನದಲ್ಲಿದೆ. ಸ್ಟಾರ್ಟ್‌ಅಪ್ ಪರಿಸರದಲ್ಲಿ ಜಾಗತಿಕ ಮುಂಚೂಣಿಯ ರಾಷ್ಟ್ರವಾಗಿದೆ. ದೇಶದಲ್ಲಿ ಸೆಮಿಕಂಡಕ್ಟರ್ ಚಿಪ್‌ಗಳ ಉತ್ಪಾದನೆ ಆರಂಭವಾಗಿದೆ. ಕೃತಕ ಬುದ್ಧಿಮತ್ತೆ (ಎಐ), ಬಾಹ್ಯಾಕಾಶ, ತಂತ್ರಜ್ಞಾನ ಮತ್ತು ನವೋದ್ಯಮ ಕ್ಷೇತ್ರಗಳಲ್ಲಿ ಭಾರತೀಯ ಯುವಕರು ಹೊಸ ಅಧ್ಯಾಯ ಬರೆಯುತ್ತಿದ್ದಾರೆ. ಡಿಜಿಟಲ್ ಆರ್ಥಿಕತೆಯ ಬೆಳವಣಿಗೆಯಲ್ಲಿ ಯುವಜನರ ಪಾತ್ರ ಮಹತ್ವದ್ದಾಗಿದೆ. ಮೇಕ್ ಇನ್ ಇಂಡಿಯಾ ಸೇರಿ ಹಲವು ಯೋಜನೆಗಳ ಯಶಸ್ಸಿನ ಹಿಂದೆ ಯುವಕರ ಶ್ರಮವಿದೆ ಎಂದರು.

**ಶಿಕ್ಷಣಕ್ಕೆ ಆದ್ಯತೆ:** ಕಳೆದ 12 ವರ್ಷಗಳಲ್ಲಿ ದೇಶದಲ್ಲಿ 650ಕ್ಕೂ ಹೆಚ್ಚು ಹೊಸ ವಿಶ್ವವಿದ್ಯಾಲಯ, 14 ಸಾವಿರಕ್ಕೂ ಹೆಚ್ಚು ಕಾಲೇಜು, 4 ಸಾವಿರಕ್ಕೂ ಹೆಚ್ಚು ಐಟಿಐ ಆರಂಭಗೊಂಡಿವೆ.9 ಐಐಎಂ, 7 ಐಐಟಿ ಸ್ಥಾಪನೆ ಯಾಗಿವೆ. ವಾರ್ಷಿಕ ಎಂಬಿಬಿಎಸ್ ಸೀಟುಗಳ ಸಂಖ್ಯೆ 1.40 ಲಕ್ಷಕ್ಕೆ ಏರಿಕೆಯಾಗಿದೆ.ದೇಶದಲ್ಲಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ 838ಕ್ಕೆ ತಲುಪಿದೆ. ದೇಶದಾದ್ಯಂತ 14 ಸಾವಿರ ಪಿಎಂಶ್ರೀ ಶಾಲೆಗಳನ್ನು ಆರಂಭಿ ಸಲಾಗಿದೆ. ಇಂಜಿನೀಯರಿಂಗ್ ಶಿಕ್ಷಣವನ್ನು ಮಾತೃಭಾಷೆಯಲ್ಲೂ ಪಡೆಯುವ ಅವಕಾಶ ಕಲ್ಪಿಸಲಾಗಿದೆ ಎಂದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಾತನಾಡಿ, ಯುವಶಕ್ತಿ, ಯುವ ಚಿಂತನೆ ಮತ್ತು ಯುವ ಆಲೋಚನೆಗಳೇ ಸ್ವಾಮಿ ವಿವೇಕಾನಂದರ ಸಂದೇಶ. ನಮ್ಮ ಸರ್ಕಾರವೂ ಇದೇ ಚಿಂತನೆಯೊಂದಿಗೆ ಕೆಲಸ ಮಾಡುತ್ತಿದೆ. ಯುವ ಯುಗ-ನವ ಯುಗ ನಮ್ಮ ಸರ್ಕಾರದ ಘೋಷ ಣೆಯಾಗಿದೆ. ಯುವಕ ಸಂಘಗಳನ್ನು ಪಂಚಾಯಿತಿ ಮಟ್ಟದ ವರೆಗೆ ಬಲಪಡಿಸುವ ಯೋಜನೆ ರೂಪಿಸಲಾಗಿದೆ. ಶ್ರೀರಾಮಕೃಷ್ಣ ಆಶ್ರಮದೊಂದಿಗೆ ರಾಜ್ಯ ಸರ್ಕಾರ ಸದಾ ನಿಲ್ಲಲಿದೆ ಎಂದರು.

ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದ ಅವರು ಮಾತನಾಡಿ, ವಿವೇಕ ಸ್ಮಾರಕವು ಯುವಕರಿಗೆ ಭಾರತದ ಜ್ಞಾನ ಪರಂಪರೆಯನ್ನು ಆಧರಿಸಿದ ಅಲ್ಪಾವಧಿ ಕೋರ್ಸ್‌ಗಳು, ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮಗಳು ಹಾಗು ಸ್ವಾಮಿ ವಿವೇಕಾನಂದರ ತತ್ವ-ಆದರ್ಶಗಳ ಪ್ರಚಾರದ ಕೇಂದ್ರವಾಗಲಿದೆ ಎಂದು ತಿಳಿಸಿದರು. ಸ್ಮಾರಕ ನಿರ್ಮಾಣಕ್ಕೆ ಭೂಮಿ ಒದಗಿಸುವಲ್ಲಿ ಸಹಕರಿಸಿದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಹಾಗು ದೇಣಿಗೆ ನೀಡಿದ ದಾನಿಗಳಿಗೆ ಕೃತಜ್ಞತೆ ಸಲ್ಲಿಸಿದರು.

ಕಾರ್ಯಕ್ರಮದ ಬಳಿಕ ನಿರ್ಗಮಿಸುತ್ತಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಭುಜ ತಟ್ಟಿ, ಕೈಹಿಡಿದು ಕೆಲ ಹೊತ್ತು ಮಾತನಾಡುತ್ತಾ ಜೊತೆಯಾಗಿ ಕರೆದೊಯ್ದ ದೃಶ್ಯ ಗಮನ ಸೆಳೆಯಿತು.

### ರಾಜ್ಯದ ಅಭಿವೃದ್ಧಿಗೆ ಬೆಂಬಲ ಕೋರಿದ ಡಿ.ಕೆ.ಶಿ.

ದೇಶದ ಬೆಳವಣಿಗೆಯು ರಾಜ್ಯದ ಪ್ರಗತಿಯೊಂದಿಗೆ ನಿಕಟ ಸಂಬಂಧ ಹೊಂದಿದೆ ಎಂದು ಪ್ರತಿಪಾದಿಸಿದ ಮುಖ್ಯಮಂತ್ರಿ, ಡಿ.ಕೆ. ಶಿವಕುಮಾರ್ ಅವರು, ಸಹಕಾರಿ ಒಕ್ಕೂಟ ವ್ಯವಸ್ಥೆಯ ಆಶಯದಡಿ ಹೆಚ್ಚಿನ ಸಹಕಾರವನ್ನು ಕೋರುವ ಮೂಲಕ ರಾಜ್ಯಕ್ಕೆ ಬೆಂಬಲ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಮಾಡಿದರು.

ಕರ್ನಾಟಕ ಮತ್ತು ಬೆಂಗಳೂರು ಜಗತ್ತಿಗೆ ಭಾರತದ ಕಿಟಕಿಯಾಗಿ ಹೊರಹೊಮ್ಮಿವೆ ಎಂದು ಬಣ್ಣಿಸಿದರು. ಇಂದು ನಮ್ಮ ಪ್ರಧಾನಿಯವರು ಇಲ್ಲಿದ್ದಾರೆ. ಕರ್ನಾಟಕ ಮತ್ತು ಬೆಂಗಳೂರಿನ ಮೂಲಕವೇ ಇಡೀ ಜಗತ್ತು ಭಾರತವನ್ನು ನೋಡುತ್ತಿದೆ. ಹೀಗಾಗಿ, ಕರ್ನಾಟಕಕ್ಕೆ ಸಹಾಯ ಮಾಡುವಲ್ಲಿ ಹಾಗು ರಾಜ್ಯವನ್ನು ಉಳಿಸುವಲ್ಲಿ ಉದಾರ ಮನೋಭಾವ ತೋರುವಂತೆ ನಾನು ಕರ್ನಾಟಕ ಸರ್ಕಾರ ಮತ್ತು ರಾಜ್ಯದ ಸಮಸ್ತ ಜನರ ಪರವಾಗಿ ಅವರನ್ನು ಕೋರುತ್ತೇನೆ. ಭಾರತವು ಕರ್ನಾಟಕ ದೊಂದಿಗೆ ಬೆಳೆಯಬೇಕು. ಅದಕ್ಕಾಗಿ ಸಹಕಾರ ನೀಡಬೇಕು. ಅಭಿ ವೃದ್ಧಿಗೆ ಕೈಜೋಡಿಸಿ ಕರ್ನಾಟಕವನ್ನು ರಕ್ಷಿಸಿ ಎಂದು ಕೋರಿದರು.

# ಹೇಮಾವತಿ ಜಲಾಶಯಕ್ಕೆ 11,686 ಕ್ಯೂಸೆಕ್ ಒಳಹರಿವು

- ಮಲೆನಾಡು ಭಾಗದಲ್ಲಿ ಮಳೆ
- ಅಣೆಕಟ್ಟೆಯಲ್ಲಿ ನೀರಿನ ಮಟ್ಟ ಏರಿಕೆ

• ಪ್ರಜೋದಯ ವರದಿ



**ಹಾಸನ:** ಮಲೆನಾಡು ಭಾಗದಲ್ಲಿ ಕಳೆದ ನಾಲ್ಕೈದು ದಿನಗಳಿಂದ ಧಾರಾಕಾರ ಮಳೆ ಸುರಿಯುತ್ತಿರುವ ಪರಿಣಾಮ ಗೊರೂರು ಹೇಮಾವತಿ ಜಲಾಶಯಕ್ಕೆ ಒಳಹರಿವು ಏರಿಕೆಯಾಗಿದೆ.

ಸಕಲೇಶಪುರ, ಆಲೂರು, ಬೇಲೂರು ತಾಲ್ಲೂಕುಗಳ ಜೊತೆಗೆ ಪಕ್ಕದ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಭಾಗದಲ್ಲಿಯೂ ಉತ್ತಮ ಮಳೆಯಾಗು ತ್ತಿರುವ ಹಿನ್ನಲೆ ಜಲಾಶಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದೆ. ಪ್ರಸ್ತುತ ಹೇಮಾವತಿ ಜಲಾಶಯಕ್ಕೆ 11,686 ಕ್ಯೂಸೆಕ್ ನೀರು ಬರುತ್ತಿದ್ದು, ಜಲಾಶಯದಿಂದ 500 ಕ್ಯೂಸೆಕ್ ನೀರನ್ನು ಹೊರ ಹರಿಸಲಾಗುತ್ತಿದೆ.

37.103 ಟಿಎಂಸಿ ಸಂಗ್ರಹ ಸಾಮರ್ಥ್ಯ ಹೊಂದಿರುವ ಹೇಮಾವತಿ ಜಲಾಶಯದಲ್ಲಿ ಸದ್ಯ 25.980 ಟಿಎಂಸಿ ನೀರು ಸಂಗ್ರಹವಾಗಿದೆ. ಜಲಾಶಯದ ಗರಿಷ್ಠ ನೀರಿನ ಮಟ್ಟ 2,922.00 ಅಡಿ ಆಗಿದ್ದು, ಪ್ರಸ್ತುತ ನೀರಿನ ಮಟ್ಟ 2,909.06 ಅಡಿಗೆ ತಲುಪಿದೆ. ನಿರಂತರ ಮಳೆ ಮುಂದುವರಿದರೆ ಜಲಾಶಯದ ನೀರಿನ ಮಟ್ಟ ಇನ್ನಷ್ಟು ಏರಿಕೆಯಾಗುವ ನಿರೀಕ್ಷೆಯಿದೆ.

ಜೂನ್ ತಿಂಗಳ ಆರಂಭದಲ್ಲಿ ಹೇಮಾವತಿ ಜಲಾಶಯದಲ್ಲಿ ಕೇವಲ 14 ಟಿಎಂಸಿ ನೀರು ಮಾತ್ರ ಇತ್ತು. ಅದರಲ್ಲಿ ಸುಮಾರು 4 ಟಿಎಂಸಿ ಡೆಡ್ ಸ್ಟೋರೇಜ್ ಆಗಿದ್ದರಿಂದ ಬಳಕೆಗೆ ಯೋಗ್ಯ ನೀರು 10 ಟಿಎಂಸಿ ಮಾತ್ರ ಲಭ್ಯವಿತ್ತು. ಬಳಿಕ ಮಲೆನಾಡು ಪ್ರದೇಶದಲ್ಲಿ ಸುರಿದ ನಿರಂತರ ಮಳೆಯ ಪರಿಣಾಮ ಕಳೆದ ಎರಡು ತಿಂಗಳಲ್ಲಿ ಜಲಾಶಯಕ್ಕೆ ಸುಮಾರು 12 ಟಿಎಂಸಿ ನೀರು ಹರಿದುಬಂದಿದ್ದು, ಪ್ರಸ್ತುತ ಸಂಗ್ರಹ ಪ್ರಮಾಣ 25.980 ಟಿಎಂಸಿಗೆ ಏರಿಕೆಯಾಗಿದೆ. ಕಳೆದ ವರ್ಷ ಈ ಹೊತ್ತಿಗೆ 36.330 ಟಿಎಂಸಿಯಷ್ಟು ನೀರು ಸಂಗ್ರಹವಾಗಿತ್ತು.

# ಪತ್ನಿಯನ್ನು ಕೊಂದು ಪತಿಯೂ ಆತ್ಮಹತ್ಯೆ

## ಅನೈತಿಕ ಸಂಬಂಧದ ಆರೋಪ: ವಿಡಿಯೋ ಮಾಡಿ ಕೊಲೆಯ ಮಾಹಿತಿ

• ಪ್ರಜೋದಯ ವರದಿ

**ಬೇಲೂರು:** ಪತ್ನಿಯನ್ನು ಕೊಂದು ಪತಿಯೂ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲ್ಲೂಕಿನ ಕೆಸಗೋಡು ಗ್ರಾಮದಲ್ಲಿ ನಡೆದಿದೆ. ಗಗನ (38) ಮೃತರು. ರಘು (41) ಆತ್ಮಹತ್ಯೆಗೆ ಶರಣಾಗಿದ್ದಾನೆ.

ಹಳೇಬೀಡು ಹೋಬಳಿ ಸಾಣೇನಹಳ್ಳಿ ಗ್ರಾಮದ ಗಗನ, ಬಿಕ್ಕೋಡು ಹೋಬಳಿ ಕೆಸಗೋಡು ಗ್ರಾಮದ ರಘು ಅವರು ಕಳೆದ 13 ವರ್ಷಗಳ ಹಿಂದೆ ವಿವಾಹವಾಗಿದ್ದರು. ದಂಪತಿಗೆ 12 ವರ್ಷದ ಹಾಗು 6 ವರ್ಷದ ಇಬ್ಬರು ಗಂಡು ಮಕ್ಕಳಿದ್ದಾರೆ. ಚಿಕ್ಕಮಗಳೂರಿನಲ್ಲಿ ಬೇಕರಿ ಉದ್ಯಮ ನಡೆಸುತ್ತಿದ್ದರು.

ಶುಕ್ರವಾರ ಮಧ್ಯಾಹ್ನ ಕಾರಿನಲ್ಲಿ ಪತ್ನಿ ಜೊತೆ ಗ್ರಾಮಕ್ಕೆ ಹೊರಟಿದ್ದ ರಘು, ಸಂಜೆ 6.30ಕ್ಕೆ ಕೆಸಗೋಡು ಗ್ರಾಮಕ್ಕೆ ಬಂದು, ನಂತರ ತನ್ನ ಸಂಬಂಧಿಕರಿಗೆ ವಿಡಿಯೋ ಕಾಲ್ ಮಾಡಿ ಪತ್ನಿಯನ್ನು ಕೊಂದಿರುವುದಾಗಿ ಹೇಳಿದ್ದಾನೆ. ಕಾರಿನಲ್ಲೇ ಪತ್ನಿ ಕೊಲೆ ಮಾಡಿ ಯಗಚಿ ನಾಲೆಗೆ ಶವ ಬಿಸಾಡಿರುವ ಶಂಕೆ ವ್ಯಕ್ತಪಡಿಸಲಾಗಿದೆ. ಬಳಿಕ ರಘು ಕಾರು ನಿಲ್ಲಿಸಿ, ರಸ್ತೆ ಬದಿಯ ಮರಕ್ಕೆ ನೇಣುಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ. ಪೊಲೀಸರು ಗಗನ ಮೃತದೇಹಕ್ಕಾಗಿ ಹುಡುಕಾಟ ನಡೆಸುತ್ತಿದ್ದಾರೆ. ಈ ಸಂಬಂಧ ಅರೇಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಪತ್ನಿ ಕೊಲೆಗೂ ಮುನ್ನ ವಿಡಿಯೋ**

ಪತ್ನಿ ಗಗನ ಕೊಲೆಗೂ ಮುನ್ನ ರಘು ತನ್ನ ಮೊಬೈಲ್‌ನಲ್ಲಿ ವಿಡಿಯೋ ಮಾಡಿದ್ದಾನೆ. » **ನಾಲ್ಕನೇ ಪುಟದಲ್ಲಿ**





### ಅಕ್ಕನಿಗೆ ರಘು ಕಿರುಕುಳ ನೀಡುತ್ತಿದ್ದ

ಹಾಸನ: ಅಕ್ರಮ ಸಂಬಂಧದಿಂದ ಬೇಸತ್ತು ಪತ್ನಿಯನ್ನು ಕೊಲೆ ಮಾಡಿರುವುದಾಗಿ ರಘು ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದಂತೆ ಮೃತೆ ಗಗನ ಅವರ ಸಹೋದರ ಯೋಗೀಶ್ ಸಹ ವಿಡಿಯೋ ಬಿಡುಗಡೆ ಮಾಡಿದ್ದು, ಅಕ್ಕನಿಗೆ ರಘು ವಿಪರೀತ ಕಿರುಕುಳ ನೀಡುತ್ತಿದ್ದ. ಪತಿ ಜೊತೆ ಬದುಕಲು ಆಗುವುದಿಲ್ಲ, ಬಿಟ್ಟು ಬರುತ್ತೇನೆಂದು ಎರಡು ತಿಂಗಳ ಹಿಂದೇಯೇ ಹೇಳಿದ್ದಳು ಎಂದಿದ್ದಾರೆ. ಜೀತದ ಆಳು ರೀತಿ ನನ್ನ ಅಕ್ಕ ಅವರ ಮನೆಯಲ್ಲಿ ದುಡಿ ದಿದ್ದಳು. ನೀನು ಬಿಟ್ಟು ಹೋದರೆ ನಿನ್ನ ಕೊಂದೇ ತಿರುತ್ತೆ ನೆಂದು ಆಕೆ ಗಂಡ ಧಮ್ಕಿ ಹಾಕಿದ್ದ. ಆತನಿಗೆ ನಾವೆಲ್ಲಾ ಬುದ್ಧಿ ಹೇಳಿ ನನ್ನ ಅಕ್ಕನನ್ನ ಬಿಟ್ಟು ಬಂದಿದ್ವಿ. ಆತ ಮಾಡಿರೋ ವಿಡಿಯೋ ಸುಳ್ಳು. ಸಣ್ಣಪುಟ್ಟ ವಿಚಾರಕ್ಕೂ ಆತ ಅಕ್ಕನಿಗೆ ಹೊಡೆಯುತ್ತಿದ್ದನೆಂದು ಯೋಗೀಶ್ ಕಣ್ಣೀರು ಸುರಿಸಿದ್ದಾರೆ.

## ಸಂಪಾದಕಿ ಭಾವನಾ ಬೆಳಗೆರೆ ಅಭಿಮತ | ಸ್ಟಡಿ ವಿತ್ ಸೊಸೈಟಿ ಕಾರ್ಯಕ್ರಮ

# ಇನ್ನೊಬ್ಬರನ್ನು ಪ್ರಶ್ನಿಸುವ ಪತ್ರಕರ್ತ ಶುದ್ಧನಾಗಿರಬೇಕು

• ಪ್ರಜೋದಯ ವರದಿ



**ಹಾಸನ:** ಸಮಾಜದಲ್ಲಿ ನಡೆಯುವ ಅನ್ಯಾಯ, ಭ್ರಷ್ಟಾಚಾರ ಹಾಗು ಅನೈತಿಕತೆಯನ್ನು ಪ್ರಶ್ನಿಸುವ ಪತ್ರಕರ್ತ ತಾನು ಮೊದಲು ಶುದ್ಧನಾಗಿರಬೇಕು. ಯಾರ ಹಂಗಿಲ್ಲದೆ ಪತ್ರಿಕೋದ್ಯಮ ಮಾಡುವವರು ಮಾತ್ರ ಯಶಸ್ವಿಯಾಗಲು ಸಾಧ್ಯ. ಆ ನಿಟ್ಟಿನಲ್ಲಿ ತಂದೆ ರವಿ ಬೆಳೆಗೆರೆ ಛಾಪು ಮೂಡಿಸಿದ್ದರೆಂದು ಹಾಯ್ ಬೆಂಗಳೂರು ಹಾಗು ಓ ಮನಸೇ ಪತ್ರಿಕೆ ಸಂಪಾದಕಿ ಭಾವನಾ ಬೆಳಗೆರೆ ಅವರು ಹೇಳಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಾಂಸ್ಕೃತಿಕ ಸಮಿತಿಯಿಂದ ಶನಿವಾರ ನಡೆದ ಸ್ಟಡಿ ವಿತ್ ಸೊಸೈಟಿ ತಿಂಗಳ ಕಾರ್ಯಕ್ರಮದಲ್ಲಿ ಪತ್ರಿಕೋದ್ಯಮ ಹಾಗು ಮಾಲೀಕತ್ವ ವಿಚಾರ ಕುರಿತು ಮಾತನಾಡಿದ ಅವರು, ಹಾಯ್ ಬೆಂಗಳೂರು ಪತ್ರಿಕೆಯಲ್ಲಿ ರವಿ ಬೆಳಗೆರೆ ಜಾಹಿರಾತು ಪ್ರಕಟಿಸಲಿಲ್ಲ. ಹಣಕ್ಕಾಗಿ ಅವರು ಯಾವತ್ತಿಗೂ ಪತ್ರಿಕೋದ್ಯಮ ಮಾಡಲಿಲ್ಲ. ಓದುಗರು ದುಡ್ಡು ಕೊಟ್ಟು ಪತ್ರಿಕೆ ಖರೀದಿಸುತ್ತಾರೆಂಬ ವಿಶ್ವಾಸ ಅವರಿಗಿತ್ತು. ಆ ನಂಬಿಕೆಯಿಂದಲೇ ಅವರು ದಶಕಗಳ ಕಾಲ ಪತ್ರಿಕೆ ಮುನ್ನಡೆಸಿಕೊಂಡು ಬಂದಿದ್ದಾರೆಂದರು.

ಪತ್ರಕರ್ತರು ಯಾವ ಸಂದರ್ಭದಲ್ಲೂ ಸತ್ಯದ ಪರ ನಿಲ್ಲಬೇಕು. ಯಾವ ಸುದ್ದಿ ಮುಖ್ಯವಾಗಿ ಪರಿಗಣಿಸಬೇಕೆಂಬ ಅರಿವು ಪತ್ರಕರ್ತನಿಗೆ ಇರಬೇಕು. ಆ ವಿದ್ಯೆಯನ್ನು ನಾನು ತಂದೆ ಅವರ ಗರಡಿಯಲ್ಲಿ ಕಲಿತಿದ್ದೇನೆ. ಸತ್ಯ ಬರೆಯುತ್ತಿದ್ದರು, ನಿಷ್ಠುರ ಆಗಿದ್ದರೆಂಬ ಕಾರಣಕ್ಕೆ ಅಪ್ಪನ ಮೇಲೆ 482 ಪ್ರಕರಣ ದಾಖಲಾಗಿದ್ದವು. ಆದರೂ ಅವರು ಬರೆಯಲು ಹಿಂಜರಿಯಲಿಲ್ಲ, ಪತ್ರಕರ್ತರು ವ್ಯವಸ್ಥೆಯಲ್ಲಿನ ತಪ್ಪು ಗುರುತಿಸಿ ಜನರಿಗೆ ತಲುಪಿಸಬೇಕೆಂದು ಹೇಳುತ್ತಿದ್ದರು. ಸುದ್ದಿ ಎಲ್ಲರಿಗೂ ಸಿಗುತ್ತದೆ, ಅದನ್ನು ವಿಶ್ಲೇಷಣೆ ಮಾಡುವ ವಿಧಾನ ಮುಖ್ಯ. ಯಾವುದೇ ಸುದ್ದಿಗೆ ವಿಜೃಂಭಣೆಯ ಚೌಕಟ್ಟು ನೀಡಿದರೆ ಪೀತ ಪತ್ರಿಕೋದ್ಯಮ ಆಗುತ್ತದೆ. ತಂದೆಯವರು ಯಾರ ಹಂಗಿಲ್ಲದೆ, ಮುಲಾಜಿಲ್ಲದೆ ಬರೆದವರು, ಯಾವುದೇ ಸುದ್ದಿ ಬರೆದರೂ ದ್ವೇಷ ಕಾರುತ್ತಿರ ಲಿಲ್ಲ. ತಪ್ಪನ್ನಷ್ಟೇ ಎತ್ತಿ ತೋರಿಸುತ್ತಿದ್ದರೆಂದರು.

**ಕಿರುಕಥೆ ಬರೆದರೆ ಲೇಖಕರಾದಂತೆ**

ಸರ್ಕಾರಿ ಕಲಾ ಕಾಲೇಜಿನ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಡಾ.ಭವ್ಯಾ ನವೀನ್ ಅವರ ಪತ್ರಿಕೋದ್ಯಮ ವಿದ್ಯಾರ್ಥಿಗಳು ಲೇಖಕರಾಗಬೇಕೆಂದರೆ ಯಾವ ಮಾನದಂಡ ಪಾಲಿಸಲಾಗು ತ್ತದೆಂಬ ಪ್ರಶ್ನೆಗೆ ಉತ್ತರಿಸಿದ ಭಾವನಾ ಅವರು, ಓ ಮನಸೇ ಪತ್ರಿಕೆಗೆ ನಾವೇ ವಿಷಯ ಕೊಟ್ಟು ಲೇಖನಗಳನ್ನು ಆಹ್ವಾನಿಸುತ್ತೇವೆ. ತಲುಪಿದ ಲೇಖನಗಳನ್ನು ಓದಿದ ಬಳಿಕ ಬರಹಗಾರರ ಸಾಮರ್ಥ್ಯ ನಮಗೆ ಗೊತ್ತಾಗುತ್ತದೆ. ನಂತರ ಅದಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶನ ನೀಡುತ್ತೇವೆಂದರು.

ಬರವಣಿಗೆ ಎನ್ನುವುದು ತಪಸ್ಸು ಇದ್ದ ಹಾಗೆ. ಯಾವುದೋ ಸಂದರ್ಭದಲ್ಲಿ ಏನಾದರೂ ಹೊಳೆದಾಗ ತಕ್ಷಣ ಬರೆದಿಟ್ಟುಕೊಳ್ಳಬೇಕು. ಬರವಣಿಗೆಯನ್ನು ಅಭ್ಯಾಸ ಮಾಡಿಕೊಳ್ಳಬೇಕು. 2006ರ ನನ್ನ ಬರವಣಿಗೆಯನ್ನು ಈಗ ನೋಡಿದರೆ ಬಾಲಿಶ ಎನಿಸುತ್ತದೆ. ಲೇಖಕರಾಗಲು ಬಯಸುವವರು ಆರಂಭದಲ್ಲಿ » **ನಾಲ್ಕನೇ ಪುಟದಲ್ಲಿ**

### ಪ್ರಧಾನಿ ಮೋದಿ ನಡೆಗೆ ಖಂಡನೆ

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ ದೆಹಲಿಯ ಜಂತರ್ ಮಂತರ್‌ನಲ್ಲಿ ಯುವಕರು ನಡೆಸಿದ ಪ್ರತಿಭಟನೆ ಕುರಿತು ಮಾತನಾಡಿದ ಭಾವನಾ ಬೆಳಗೆರೆ ಅವರು, ಜೆನ್‌ಜಿ ಪೀಳಿಗೆಗೆ ತಾಳ್ಮೆ ಇಲ್ಲ. ಎಲ್ಲದಕ್ಕೂ ತಕ್ಷಣ ಪ್ರತಿಕ್ರಿಯೆ ಬಯಸುತ್ತಾರೆ. ಸಾಮಾಜಿಕ ಜಾಲತಾಣಗಳು ಅವರನ್ನು ಒಂದುಗೂಡಿಸುತ್ತಿದೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರು ಇಂತಹ ಸೂಕ್ಷ್ಮ ಸಂದರ್ಭದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಲು ಇನ್‌ಸ್ಟಾಗ್ರಾಂ, ಎಕ್ಸ್ ಖಾತೆ ಬಳಸುತ್ತಿರುವುದು ಖಂಡನೀಯ. ಹೇಗಾದರೂ ಸರಿ ದೇಶದ ಜನರಿಗೆ ಸಂದೇಶ ನೀಡಿದರೆ ಸಾಕೆಂದು ಅವರು ಬಯಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದರೆ ಪ್ರಶ್ನೆಗಳಿಗೆ ಉತ್ತರಿಸಬೇಕಾಗುತ್ತದೆಂಬ ಭಯವೂ ಕಾಡುತ್ತಿರಬಹುದು ಎಂದರು.

# ಎನ್‌ಟಿಸಿ ಫ್ಯಾಕ್ಟರಿಯಲ್ಲಿ 1 ಕೋಟಿ ರೂ. ಮೌಲ್ಯದ ವಸ್ತು ಕಳವು

• ಪ್ರಜೋದಯ ವರದಿ

**ಹಾಸನ:** ನಗರದ ಕೈಗಾರಿಕಾ ಪ್ರದೇಶದಲ್ಲಿರುವ ಎನ್‌ಟಿಸಿ ಬಟ್ಟೆ ಫ್ಯಾಕ್ಟರಿಯಲ್ಲಿ ಸುಮಾರು 1,00,88,000 ರೂ. ಮೊತ್ತದ ಇಲೆಕ್ಟ್ರಾನಿಕ್ ವಸ್ತುಗಳು ಕಳುವಾಗಿರುವ ಘಟನೆ ನಡೆದಿದೆ.

ಜು.24 ರಿಂದ 26ರ ಅವಧಿಯಲ್ಲಿ ಕಳ್ಳತನ ನಡೆದಿದ್ದು, ಜು.27ರಂದು ಕಳ್ಳತನದ ವಿಚಾರ ಬೆಳಕಿಗೆ ಬಂದಿದೆ. ಫ್ಯಾಕ್ಟರಿಯ ಹೊರ ಹಾಗು ಒಳಭಾಗದ ಶೆಟರ್ ಬೆಂಡಾಗಿದೆ. ಕಬ್ಬಿಣದ ಶೆಟರ್ ಬೀಗ ಮುರಿದಿರುವ ಕಳ್ಳರು ಮೇಲ್ವಿಚಾರಕರ ಕೊಠಡಿಯನ್ನು ಹಾನಿಗೊಳಿಸಿದ್ದಾರೆ. 16 ಲ. ರೂ. ಮೌಲ್ಯದ ಡಿಸ್‌ಪ್ಲೇ ಪ್ಯಾನಲ್ ಬೋರ್ಡ್, ಲಕ್ಷಾಂತರ ರೂ. ಬೆಲೆ ಬಾಳುವ ಏರ್‌ಜೆಟ್ ಲೂಮ್ಸ್, 46 ಲಕ್ಷ ರೂ. ಬೆಲೆಯ ಪಿಸಿಬಿ, 6 ಲಕ್ಷ ರೂ. ಬೆಲೆಯ ಸೆನ್ಸಾರ್ ವೀವಿಂಗ್ ಯಂತ್ರ, ಸ್ಟಬ್ಲಿ ವಾರ್ಪ್ ಟೈಯಿಂಗ್ (ನಾಟಿಂಗ್) ಯಂತ್ರ ಅಪಹರಿಸಲಾಗಿದೆ.

ಈ ಸಂಬಂಧ ಫ್ಯಾಕ್ಟರಿ ಮಾನವ ಸಂಪನ್ಮೂಲ ಅಧಿಕಾರಿ ವಿರೇಶ್ ಮುದುನೂರು ಹಾಗು ತಾಂತ್ರಿಕ ವಿಭಾಗದ ವ್ಯವಸ್ಥಾಪಕಿ ಅಂಕಿತ ವರ್ಮಾ ಬಡಾವಣೆ ಠಾಣೆಯಲ್ಲಿ ಎಫ್ ಐಆರ್ ದಾಖಲಿಸಿದ್ದಾರೆ.

# ಪತ್ನಿ ಮೇಲೆ ಹಲ್ಲೆ ನಡೆಸಿದ್ದ ಪತಿಗೆ 6 ವರ್ಷ ಕಾರಾಗೃಹ ಶಿಕ್ಷೆ

• ಪ್ರಜೋದಯ ವರದಿ

**ಹಾಸನ:** ಕುಡಿದ ಅಮಲಿನಲ್ಲಿ ಹೆಂಡತಿ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದ ಪತಿಗೆ 6 ವರ್ಷ ಕಾರಾಗೃಹ ಶಿಕ್ಷೆ ವಿಧಿಸಿ ಜಿಲ್ಲಾ ನ್ಯಾಯಾಲಯ ತೀರ್ಪು ಪ್ರಕಟಿಸಿದೆ.

ತಾಲ್ಲೂಕಿನ ಕೊಕ್ಕನಘಟ್ಟ ನಿವಾಸಿ ನಂಜೇಶಗೌಡ ಶಿಕ್ಷೆಗೆ ಒಳಗಾದ ಅಪರಾಧಿ. 2022ರ ಫೆ. 13ರಂದು ಕೊಕ್ಕನಘಟ್ಟ ಕ್ರಾಸ್‌ನ ಮಳಲಿಯಮ್ಮ ಕ್ಯಾಂಟೀನ್‌ನಲ್ಲಿ ಕೆಲಸ ಮಾಡುತ್ತಿದ್ದ ಹೆಂಡತಿ ರೂಪ ಅವರ ಮೇಲೆ ಹಲ್ಲೆ ನಡೆಸಿದ್ದ.

ಬೆಳಿಗ್ಗೆ ಬ್ಯಾಂಕ್‌ಗೆ ಹೋಗಿ ಅಡವಿಟ್ಟಿರುವ ಚಿನ್ನಾಭರಣ ಬಿಡಿಸಿಕೊಂಡು ಬರೋಣವೆಂದು ಹೇಳಿದ್ದಕ್ಕೆ ಆಕ್ರೋಶಗೊಂಡ ನಂಜೇಶಗೌಡ ಮದ್ಯದ ಅಮಲಿನಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ಕಲಹ ಸೃಷ್ಟಿಸಿದ್ದ. ಇಬ್ಬರ ನಡುವೆ ವಾಕ್ಸಮರ ಮುಂದುವರಿದು ಸಿಟ್ಟಿನಲ್ಲಿ ನಂಜೇಶಗೌಡನು ಮುದ್ದೆ ಮಾಡುವ ಅಡಿಕೆ ದಬ್ಬೆಯಿಂದ ಹೆಂಡತಿಯ ಕುತ್ತಿಗೆ, ಬಾಯಿಗೆ ಹೊಡೆದ ಪರಿಣಾಮ ಗಂಭೀರ ಗಾಯ ಗೊಂಡಿದ್ದರು. ಈ ಸಂಬಂಧ ಪ್ರಕರಣದಾಖಲಿಸಿಕೊಂಡಿದ್ದ ಗ್ರಾಮಾಂತರ ಠಾಣೆ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಹೆಚ್.ಆರ್. ರವಿಕುಮಾರ್ ಅವರು ದೋಷಾರೋಪ ಸಾಬೀತಾಗಿದೆ ಎಂದು 6 ವರ್ಷ ಕಠಿಣ ಕಾರಾಗೃಹ ಮತ್ತು 10 ಸಾವಿರ ರೂ. ದಂಡ ವಿಧಿಸಿದ್ದಾರೆ. ಸರ್ಕಾರದ ಪರವಾಗಿ ಈ.ಡಿ.ಶ್ರೀನಿವಾಸ ವಾದ ಮಂಡಿಸಿದ್ದರು.

# ಬಂದ್ ಕರೆ ಹಿಂಪಡೆಯಲು ಸಿ.ಎಂ. ಮನವಿ

• ಪ್ರಜೋದಯ ವರದಿ

**ಮೈಸೂರು:** ಕಬಿನಿ ಜಲಾಶಯ ಭರ್ತಿ ಹಂತ ತಲುಪಿದ್ದು, ಮುಂದೆ ನಾವ್ಯಾರು ಕಾವೇರಿ ನೀರನ್ನು ಹಿಡಿದಿಡಲು ಆಗದು. ಹೋರಾಟಗಾರರು ರಾಜ್ಯದ ಗೌರವ ಕಾಪಾಡಲು ಬಂದ್ ಕರೆ ಯನ್ನು ಹಿಂಪಡೆಯಬೇಕು. ಕಾನೂನು ಪಾಲನೆಗೆ ಅವಕಾಶ ಮಾಡಿಕೊಡಬೇಕೆಂದು ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೋರಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮಿಳುನಾಡಿಗೆ ನೀರು ಹರಿಸುವ ಸಂಬಂಧ ಭಾನುವಾರ ಸರ್ವಪಕ್ಷ ಸಭೆ ಕರೆದಿದ್ದು, ಅಲ್ಲಿ ಒಮ್ಮತದ ತೀರ್ಮಾನಕ್ಕೆ ಬರುತ್ತೇವೆ. ಅಲ್ಲಿವರೆಗೆ ಶಾಂತಿ ಕಾಪಾಡಬೇಕೆಂದರು. ಕಾವೇರಿ ನೀರು ಹಂಚಿಕೆ ಸಂಬಂಧ ಪರಸ್ಪರ ಮಾತುಕತೆಗೆ ತಮಿಳುನಾಡು ಮುಖ್ಯಮಂತ್ರಿ ವಿಜಯ್ ಆ.3ರಂದು ಬೆಂಗಳೂರಿಗೆ ಬರಬೇಕಿತ್ತು. ಸದ್ಯ ರಾಜ್ಯದಲ್ಲಿ ಪ್ರತಿಭಟನೆಗಳು ನಡೆದಿದ್ದು, ಪರಿಸ್ಥಿತಿ ತಿಳಿಯಾದ ನಂತರ ಮತ್ತೊಮ್ಮೆ ಬರುವಂತೆ ಕೋರಿದ್ದೇನೆ ಎಂದರು.








## ಪ್ರತಿಭಟನಾಕಾರರ ಮನವೊಲಿಸಿದ ಸಂಸದ-ಶಾಸಕ | ಕುಟುಂಬಸ್ಥರಿಗೆ ಸಾಂತ್ವನ

# ಕಾಡಾನೆ ದಾಳಿಗೆ ರೈತ ಬಲಿ: ಶಾಶ್ವತ ಪರಿಹಾರಕ್ಕೆ ಆಗ್ರಹ

• ಪ್ರಜೋದಯ ವರದಿ





**ಬೇಲೂರು:** ಕಾಡಾನೆ ದಾಳಿಯಿಂದ ಮೃತಪಟ್ಟ ಅರೇಹಳ್ಳಿ ಹೋಬಳಿ ಕಣಗುಪ್ಪೆ ಗ್ರಾಮದ ಧರ್ಮರಾಜು ಅವರ ಮನೆಗೆ ಶನಿವಾರ ಸಂಸದ ಶ್ರೇಯಸ್ ಪಟೇಲ್ ಹಾಗು ಶಾಸಕ ಹೆಚ್.ಕೆ. ಸುರೇಶ್ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಕಾಡಾನೆ ಹಾವಳಿ ಸಮಸ್ಯೆ ತಡೆಗೆ ಶಾಶ್ವತ ಪರಿಹಾರ ಸಿಗುವವರೆಗೂ ಮೃತ ದೇಹ ಎತ್ತಲು ಬಿಡುವುದಿಲ್ಲವೆಂದು ಗ್ರಾಮಸ್ಥರು ವಾಹನ ತಡೆದು ಸರ್ಕಾರ ಹಾಗು ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಬುಧವಾರ ಸಂಜೆ ಎಸ್‌ಐಆರ್ ಪಟ್ಟಿಗೆ ಅಗತ್ಯವಿದ್ದ ಫೋಟೋ ತೆಗೆಸಿಕೊಳ್ಳಲು ಧರ್ಮರಾಜು ಬೇಲೂರಿಗೆ ತೆರಳಿ ರಾತ್ರಿ ಮನೆಗೆ ಹೋಗುತ್ತಿದ್ದಾಗ ಒಂಟಿ ಸಲಗ ದಾಳಿ ನಡೆಸಿ ಬಲಿ ಪಡೆದಿದ್ದು, 2 ದಿನಗಳ ನಂತರ ಸುದರ್ಶನ್ ಎಂಬುವವರ ತೋಟದ ಬಳಿ ಮೃತದೇಹ ಪತ್ತೆಯಾಗಿದೆ.

ಘಟನಾ ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಹೆಚ್.ಕೆ.ಸುರೇಶ್, ರೈತನ ಸಾವಿಗೆ ಸಂತಾಪ ಸೂಚಿಸಿ ಮೊದಲು ಅಂತ್ಯಕ್ರಿಯೆ ನೆರವೇರಿಸೋಣ. ಕಾಡಾನೆ ಹಾವಳಿಗೆ ಶಾಶ್ವತ ಪರಿಹಾರಕ್ಕಾಗಿ ರೈತ ಸಂಘಟನೆಗಳು, ಕಾಫಿ ಬೆಳೆಗಾರರು ಹಾಗೂ ಜನಪ್ರತಿನಿಧಿಗಳೊಂದಿಗೆ ಸರ್ಕಾರದ ಮಟ್ಟದಲ್ಲಿ ಬಲವಾದ ಹೋರಾಟ ನಡೆಸೋಣವೆಂದು ಮನವಿ ಮಾಡಿದರು. ಮನವಿಗೆ ಸ್ಪಂದಿಸಿದ ಗ್ರಾಮಸ್ಥರು ಪ್ರತಿಭಟನೆ ವಾಪಾಸ್ ಪಡೆದು ಅಂತ್ಯಸಂಸ್ಕಾರಕ್ಕೆ ಸಹಕರಿಸಿದರು.

**ಸಂಸದ ಶ್ರೇಯಸ್ ಪಟೇಲ್ ಸಾಂತ್ವನ**

ಮೃತರ ನಿವಾಸಕ್ಕೆ ಭೇಟಿ ನೀಡಿ ಕುಟುಂಬಕ್ಕೆ ಸಾಂತ್ವನ ಹೇಳಿದ ಸಂಸದ ಶ್ರೇಯಸ್ ಪಟೇಲ್, ಧರ್ಮರಾಜು ಅವರ ಅಕಾಲಿಕ ನಿಧನ ಅತ್ಯಂತ ದುಃಖಕರ ಸಂಗತಿ. ಈ ವೇಳೆ ಸ್ಥಳೀಯ ನಿವಾಸಿಗಳು, ಜನಪ್ರತಿನಿಧಿಗಳು ಹಾಗು ಅರಣ್ಯ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಕಾಡಾನೆ ಹಾವಳಿಯಿಂದ ಗ್ರಾಮಸ್ಥರು ಮತ್ತು ತೋಟದ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚಿಸಿದರು. ದುರ್ಘಟನೆಗಳು ಮರುಕಳುಹಿಸದಂತೆ ಶಾಶ್ವತ ಹಾಗು ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು. ಜನರ ಜೀವ ಹಾಗೂ ಆಸ್ತಿ ರಕ್ಷಣೆಗೆ ಅರಣ್ಯ ಇಲಾಖೆ ಮತ್ತು ಸರ್ಕಾರ ಸಮನ್ವಯದಿಂದ ತುರ್ತು ಹಾಗೂ ದೀರ್ಘಕಾಲೀನ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

### 20 ಲಕ್ಷ ರೂ. ಪರಿಹಾರ ವಿತರಣೆ

ಸ್ಥಳದಲ್ಲೇ ಅರಣ್ಯ ಇಲಾಖೆ ವತಿಯಿಂದ ಮೃತ ಧರ್ಮರಾಜು ಅವರ ಕುಟುಂಬಕ್ಕೆ 20 ಲಕ್ಷ ರೂ. ಪರಿಹಾರದ ಚೆಕ್ ವಿತರಿಸಲಾಯಿತು. ಈ ವೇಳೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ ಶಾಸಕರು, ಮುಂದಿನ ದಿನಗಳಲ್ಲಿ ಇಂತಹ ದುರಂತ ಮರುಕಳುಹಿಸದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು.

# ಕಾಮನ್‌ವೆಲ್ತ್ ಕ್ರೀಡೆ: ಬಾಕ್ಸಿಂಗ್‌ನಲ್ಲಿ ಭಾರತಕ್ಕೆ 2 ಚಿನ್ನ

## ಪ್ರೀತಿ ಪನ್ವಾರ್, ಜಾಸ್ಮಿನ್ ಲಂಬೋರಿಯಾ ಅದ್ಭುತ ಸಾಧನೆ

• ಪ್ರಜೋದಯ ವರದಿ

**ಗ್ಲಾಸ್ಗೊ:** 2026ರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಭಾರತಕ್ಕೆ ಬಾಕ್ಸಿಂಗ್‌ನಲ್ಲಿ ಡಬಲ್ ಚಿನ್ನದ ಸಾಧನೆ ಮಾಡಿದ್ದು, ಪ್ರೀತಿ ಪನ್ವಾರ್ 54 ಕೆ.ಜಿ. ವಿಭಾಗದಲ್ಲಿ ಚಿನ್ನ ಗೆದ್ದರೆ, ಜಾಸ್ಮಿನ್ ಲಂಬೋರಿಯಾ 57 ಕೆ.ಜಿ. ವಿಭಾಗದಲ್ಲಿ ಮೈಕೆಲಾ ವಾಲ್ಷ್ ಅವರನ್ನು ಸೋಲಿಸಿ ಎರಡನೇ ಚಿನ್ನ ಗೆದ್ದರು. ಈ ಗೆಲುವು ಭಾರತದ ಒಟ್ಟಾರೆ ಚಿನ್ನದ ಪದಕಗಳ ಸಂಖ್ಯೆಯನ್ನು 7 ಕ್ಕೇರಿಸಿದೆ, ದೇಶವು 6ನೇ ಸ್ಥಾನಕ್ಕೇರಿದೆ.

2026ರ ಕಾಮನ್‌ವೆಲ್ತ್ ಗೇಮ್ಸ್ ಕ್ರೀಡಾಕೂಟದ ಹತ್ತನೇ ದಿನದಂದು ಭಾರತ ಕೆಲವೇ ನಿಮಿಷಗಳ ಅಂತರದಲ್ಲಿ ಎರಡು ಬಂಗಾರದ ಪದಕಗಳನ್ನು ತನ್ನದಾಗಿಸಿಕೊಂಡಿದೆ. ಮೊದಲಿಗೆ 54 ಕೆ.ಜಿ. ವಿಭಾಗದ ಮಹಿಳಾ ಬಾಕ್ಸಿಂಗ್ ಫೈನಲ್‌ನಲ್ಲಿ ಪ್ರೀತಿ ಪನ್ವಾರ್ ಚಿನ್ನ ಗೆದ್ದರೆ, ಅವರ ನಂತರ ಜಾಸ್ಮಿನ್ ಲಂಬೋರಿಯಾ ಕೂಡ ಬಂಗಾರದ ಪದಕಕ್ಕೆ ಮುತ್ತಿಟ್ಟರು.

2026ರ ಕಾಮನ್‌ವೆಲ್ತ್ ಗೇಮ್ಸ್ ಕ್ರೀಡಾಕೂಟದ ಹತ್ತನೇ ದಿನದಂದು ಭಾರತ ಕೆಲವೇ ನಿಮಿಷಗಳ ಅಂತರದಲ್ಲಿ ಎರಡು ಬಂಗಾರದ ಪದಕಗಳನ್ನು ತನ್ನದಾಗಿಸಿಕೊಂಡಿದೆ. ಮೊದಲಿಗೆ 54 ಕೆ.ಜಿ. ವಿಭಾಗದ ಮಹಿಳಾ ಬಾಕ್ಸಿಂಗ್ ಫೈನಲ್‌ನಲ್ಲಿ ಪ್ರೀತಿ ಪನ್ವಾರ್



ಚಿನ್ನ ಗೆದ್ದರೆ, ಜಾಸ್ಮಿನ್ ಲಂಬೋರಿಯಾ ಕೂಡ ಬಂಗಾರಕ್ಕೆ ಮುತ್ತಿಟ್ಟರು.

ಜಾಸ್ಮಿನ್ ಲಂಬೋರಿಯಾ 57 ಕೆ.ಜಿ. ವಿಭಾಗದ ಮಹಿಳೆಯರ ಬಾಕ್ಸಿಂಗ್ ಫೈನಲ್ ಸ್ಪರ್ಧೆಯಲ್ಲಿ ಉತ್ತರ ಐರ್ಲೆಂಡ್‌ನ ಮೈಕೆಲಾ ವಾಲ್ಷ್ ಅವರನ್ನು 5-0 ಅಂತರದಿಂದ ಸೋಲಿಸಿ ಪ್ರಶಸ್ತಿ ಗೆದ್ದರು. ಜಾಸ್ಮಿನ್ ಈ ಹಿಂದೆ 2022 ರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಭಾರತಕ್ಕಾಗಿ ಲೈಟ್ ವೇಟ್ ವಿಭಾಗದಲ್ಲಿ ಕಂಚಿನ ಪದಕವನ್ನು ಗೆದ್ದಿದ್ದರು.

ಜಾಸ್ಮಿನ್ ಲಂಬೋರಿಯಾ 57 ಕೆಜಿ ವಿಭಾಗದ ಮಹಿಳೆಯರ ಬಾಕ್ಸಿಂಗ್ ಫೈನಲ್ ಸ್ಪರ್ಧೆಯಲ್ಲಿ ಉತ್ತರ ಐರ್ಲೆಂಡ್‌ನ ಮೈಕೆಲಾ ವಾಲ್ಷ್ ಅವರನ್ನು 5-0 ಅಂತರದಿಂದ ಸೋಲಿಸಿ ಪ್ರಶಸ್ತಿ ಗೆದ್ದರು. ಜಾಸ್ಮಿನ್ ಈ ಹಿಂದೆ 2022 ರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಭಾರತಕ್ಕಾಗಿ ಲೈಟ್‌ವೇಟ್ ವಿಭಾಗದಲ್ಲಿ ಕಂಚಿನ ಪದಕವನ್ನು ಗೆದ್ದಿದ್ದರು.

ಅಂದರೆ ಇದು ಜಾಸ್ಮಿನ್ ಲಂಬೋರಿಯಾ ಅವರ ಎರಡನೇ ಕಾಮನ್‌ವೆಲ್ತ್ ಕ್ರೀಡಾಕೂಟದ ಪದಕವಾಗಿದೆ. ಮಾತ್ರವಲ್ಲದೆ ಬಾಕ್ಸಿಂಗ್‌ನಲ್ಲಿ ಭಾರತಕ್ಕೆ ಸತತ ಎರಡು ಚಿನ್ನದ ಪದಕಗಳನ್ನು ಗೆದ್ದುಕೊಂಡಂತಾಗಿದೆ. ಈ ಎರಡು ಚಿನ್ನದ ಪದಕಗಳೊಂದಿಗೆ ಭಾರತದ ಚಿನ್ನದ ಪದಕಗಳ ಸಂಖ್ಯೆ 7 ಕ್ಕೇರಿದ್ದು, ಒಟ್ಟಾರೆ ಪದಕಗಳ ಪಟ್ಟಿಯಲ್ಲಿ 6ನೇ ಸ್ಥಾನಕ್ಕೇರಿದೆ.

ಅಂದರೆ ಇದು ಜಾಸ್ಮಿನ್ ಲಂಬೋರಿಯಾ ಅವರ ಎರಡನೇ ಕಾಮನ್‌ವೆಲ್ತ್ ಕ್ರೀಡಾಕೂಟದ ಪದಕವಾಗಿದೆ. ಮಾತ್ರವಲ್ಲದೆ ಬಾಕ್ಸಿಂಗ್‌ನಲ್ಲಿ ಭಾರತಕ್ಕೆ ಸತತ ಎರಡು ಚಿನ್ನದ ಪದಕಗಳನ್ನು ಗೆದ್ದುಕೊಂಡಂತಾಗಿದೆ. ಈ ಎರಡು ಚಿನ್ನದ ಪದಕಗಳೊಂದಿಗೆ ಭಾರತದ ಚಿನ್ನದ ಪದಕಗಳ ಸಂಖ್ಯೆ 7 ಕ್ಕೇರಿದ್ದು, ಒಟ್ಟಾರೆ ಪದಕಗಳ ಪಟ್ಟಿಯಲ್ಲಿ 6ನೇ ಸ್ಥಾನಕ್ಕೇರಿದೆ.

ಇದಕ್ಕೂ ಮೊದಲು ಜಾಸ್ಮಿನ್ ಲಂಬೋರಿಯಾ 2025 ರಲ್ಲಿ ನಡೆದಿದ್ದ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಮಹಿಳೆಯರ 57 ಕೆ.ಜಿ. ವಿಭಾಗದಲ್ಲಿ ಚಿನ್ನದ ಪದಕ ಗೆಲ್ಲುವ ಮೂಲಕ ದೇಶಕ್ಕೆ ಕೀರ್ತಿ ತಂದಿದ್ದರು. ಈ ಫೈನಲ್ ಪಂದ್ಯದಲ್ಲಿ ಅವರು 2024 ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ವಿಜೇತೆ ಪೋಲೆಂಡ್‌ನ ಜೂಲಿಯಾ ಸ್ಜೆರೆಮೆಟಾ ಅವರನ್ನು ಸೋಲಿಸುವಲ್ಲಿ ಯಶಸ್ವಿಯಾಗಿದ್ದರು.

ಇದಕ್ಕೂ ಮೊದಲು ಜಾಸ್ಮಿನ್ ಲಂಬೋರಿಯಾ 2025 ರಲ್ಲಿ ನಡೆದಿದ್ದ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಮಹಿಳೆಯರ 57 ಕೆ.ಜಿ. ವಿಭಾಗದಲ್ಲಿ ಚಿನ್ನದ ಪದಕ ಗೆಲ್ಲುವ ಮೂಲಕ ದೇಶಕ್ಕೆ ಕೀರ್ತಿ ತಂದಿದ್ದರು. ಈ ಫೈನಲ್ ಪಂದ್ಯದಲ್ಲಿ ಅವರು 2024 ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ವಿಜೇತೆ ಪೋಲೆಂಡ್‌ನ ಜೂಲಿಯಾ ಸ್ಜೆರೆಮೆಟಾ ಅವರನ್ನು ಸೋಲಿಸುವಲ್ಲಿ ಯಶಸ್ವಿಯಾಗಿದ್ದರು.

ಹರಿಯಾಣದ ಭಿವಾನಿ ಜಿಲ್ಲೆಯವರಾಗಿರುವ ಜಾಸ್ಮಿನ್ ಲಂಬೋರಿಯಾ ಪ್ರಸ್ತುತ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಜಾಸ್ಮಿನ್ ಅವರ ತಂದೆ ಜೈವೀರ್ ಲಂಬೋರಿಯಾ ಗೃಹರಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ಜಾಸ್ಮಿನ್ ಅವರ ಮುತ್ತಜ್ಜ ಹವಾ ಸಿಂಗ್ ಭಾರತದ ಪ್ರಸಿದ್ಧ ಹೆವಿವೇಯ್ಟ್ ಬಾಕ್ಸರ್ ಆಗಿದ್ದರು. ಅವರು ಎರಡು ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನದ ಪದಕಗಳನ್ನು ಗೆಲ್ಲುವ ಮೂಲಕ ದೇಶಕ್ಕೆ ಕೀರ್ತಿ ತಂದಿದ್ದರು.

ಹರಿಯಾಣದ ಭಿವಾನಿ ಜಿಲ್ಲೆಯವರಾಗಿರುವ ಜಾಸ್ಮಿನ್ ಲಂಬೋರಿಯಾ ಪ್ರಸ್ತುತ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಜಾಸ್ಮಿನ್ ಅವರ ತಂದೆ ಜೈವೀರ್ ಲಂಬೋರಿಯಾ ಗೃಹರಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ಜಾಸ್ಮಿನ್ ಅವರ ಮುತ್ತಜ್ಜ ಹವಾಸಿಂಗ್ ಭಾರತದ ಪ್ರಸಿದ್ಧ ಹೆವಿವೇಯ್ಟ್ ಬಾಕ್ಸರ್ ಆಗಿದ್ದರು. ಅವರು ಎರಡು ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನದ ಪದಕಗಳನ್ನು ಗೆಲ್ಲುವ ಮೂಲಕ ದೇಶಕ್ಕೆ ಕೀರ್ತಿ ತಂದಿದ್ದರು

## ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ದರ ಭಾರೀ ಇಳಿಕೆ

**ನವದೆಹಲಿ:** ಬಹುನಿರೀಕ್ಷಿತ ಪರಿಹಾರವಾಗಿ, ತೈಲ ಮಾರುಕಟ್ಟೆ ಕಂಪನಿಗಳು ದೇಶದಾದ್ಯಂತ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ ಭಾರಿ ಇಳಿಕೆ ಮಾಡಿವೆ.ಸತತ ಎರಡನೇ ತಿಂಗಳು ಬೆಲೆ ಕಡಿತಗೊಂಡಿದ್ದು, ಬೆಂಗಳೂರು, ದೆಹಲಿ, ಕೋಲ್ಕತ್ತಾ ಸೇರಿದಂತೆ ಪ್ರಮುಖ ಮಹಾನಗರಗಳಲ್ಲಿ 19 ಕೆ.ಜಿ. ವಾಣಿಜ್ಯ ಸಿಲಿಂಡರ್ ಬೆಲೆಯು ಸುಮಾರು 200 ರೂ.ಗಳವರೆಗೆ ಇಳಿಕೆಯಾಗಿದೆ. ಹೊಸ ದರಗಳು ಶನಿವಾರದಿಂದಲೇ ಜಾರಿಗೆ ಬಂದಿವೆ.

ಜೊತೆಗೆ, 5 ಕೆ.ಜಿ. ಮುಕ್ತ ವ್ಯಾಪಾರ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ಶೇ. 13ರಷ್ಟು ಕಡಿಮೆ ಮಾಡಲಾಗಿದ್ದು, ದೆಹಲಿಯಲ್ಲಿ ಇದರ ಚಿಲ್ಲರೆ ಬೆಲೆ 808.50 ರೂ.ಗೆ ಪರಿಷ್ಕೃತಗೊಂಡಿದೆ. ಆದರೆ, ಸಾರ್ವಜನಿಕರಿಗೆ ನಿರಾಳತೆ ನೀಡುವ ನಿಟ್ಟಿನಲ್ಲಿ ಗೃಹಬಳಕೆಯ 14.2 ಕೆ.ಜಿ. ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ.

ಇದೀಗ ಆಗಸ್ಟ್ ತಿಂಗಳ ಆರಂಭದಲ್ಲೇ ಮತ್ತೊಮ್ಮೆ ಬೆಲೆ ಇಳಿಕೆ ಮಾಡಿರುವುದು ವ್ಯಾಪಾರಸ್ಥರಿಗೆ ದೊಡ್ಡ ಮಟ್ಟದ ಆರ್ಥಿಕ ಬಿಡುವು ನೀಡಿದೆ.

## ಬಗರ್ ಹುಕುಂ ಸಾಗುವಳಿ ಸಮಿತಿ ಸಭೆ
# 22 ಅರ್ಜಿಗಳಿಗೆ ಅನುಮೋದನೆ



• ಪ್ರಜೋದಯ ವರದಿ

**ಸಕಲೇಶಪುರ:** ಶಾಸಕ ಸಿಮೆಂಟ್ ಮಂಜು ಅವರ ಅಧ್ಯಕ್ಷತೆಯಲ್ಲಿ ಶನಿವಾರ ಪಟ್ಟಣದ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಬಗರ್ ಹುಕುಂ ಸಾಗುವಳಿ ಸಮಿತಿ ಸಭೆ ನಡೆಯಿತು.

ತಹಶೀಲ್ದಾರ್ ಸುಪ್ರಿತಾ, ಸಮಿತಿ ಸದಸ್ಯರಾದ ಹೆಚ್.ಹೆಚ್.ಉದಯ್, ಹಳೆಕೆರೆ ಚಂದ್ರು, ಗೀತಾ ಸೇರಿ ಇತರ ಅಧಿಕಾರಿಗಳು ಸಾಗುವಳಿ ಹಕ್ಕಿಗಾಗಿ ಸಲ್ಲಿಕೆಯಾಗಿರುವ ಅರ್ಜಿ ಹಾಗು ಸಂಬಂಧಿತ ದಾಖಲೆಗಳ ಪರಿಶೀಲಿಸಿದರು. 30 ಅರ್ಜಿಗಳ ಪೈಕಿ 22 ಫಲಾನುಭವಿಗಳ ಅರ್ಜಿಗೆ ಸಮಿತಿ ಅನುಮೋದನೆ ನೀಡಿತು.

ಶಾಸಕ ಸಿಮೆಂಟ್ ಮಂಜು ಅವರು ಮಾತನಾಡಿ, ಹಲವು ವರ್ಷಗಳಿಂದ ಜಮೀನಿನಲ್ಲಿ ಕೃಷಿ ಮಾಡುತ್ತಿದ್ದು, ನಿಯಮಾನುಸಾರ ಅರ್ಜಿ ಸಲ್ಲಿಸಿ ಅನುಭವದಲ್ಲಿರುವ ರೈತರ ಜಮೀನುಗಳಿಗೆ ತಹಶೀಲ್ದಾರ್ ಹಾಗು ಕಂದಾಯ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಬೇಕು. ಅರ್ಜಿ ಸಲ್ಲಿಸಿರುವ ರೈತರಿಗೆ ಅನ್ಯಾಯವಾಗದಂತೆ ದಾಖಲೆಗಳನ್ನು ಸಮಗ್ರವಾಗಿ ಪರಿಶೀಲಿಸಿ, ಅರ್ಹ ಫಲಾನುಭವಿಗಳಿಗೆ ಮುಂದಿನ ಸಭೆಯಲ್ಲೇ ಸಾಗುವಳಿ ಪತ್ರ ವಿತರಿಸುವಂತೆ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು.

ರೈತರನ್ನು ಅನಗತ್ಯವಾಗಿ ಕಚೇರಿಗೆ ಅಲೆದಾಡಿಸಬಾರದು. ಮಧ್ಯವರ್ತಿಗಳಿಗೆ ಅವಕಾಶ ನೀಡದೆ ನೇರವಾಗಿ ಫಲಾನುಭವಿ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಕಾರ್ಯ ನಿರ್ವಹಿಸಬೇಕು. ಯಾವುದೇ ಸಮಸ್ಯೆಗಳಿದ್ದರೆ ತಮ್ಮ ಗಮನಕ್ಕೆ ತರಬೇಕು. ಪಾರದರ್ಶಕವಾಗಿ ಪರಿಶೀಲನೆ ನಡೆಸಿ ನಿಯಮಾನುಸಾರ ಸಾಗುವಳಿ ಪತ್ರ ವಿತರಿಸಬೇಕೆಂದರು.

# ಪ್ರತಿಷ್ಠೆಗಾಗಿ ಮಕ್ಕಳನ್ನು ಕಾನ್ವೆಂಟ್‌ಗೆ ದಾಖಲಿಸಬೇಡಿ

## ಪೋಷಕರಿಗೆ ಶಾಸಕ ಎ.ಮಂಜು ಕಿವಿಮಾತು

• ಪ್ರಜೋದಯ ವರದಿ

**ಹೊಳೆನರಸೀಪುರ:** ಪೋಷಕರು ಪ್ರತಿಷ್ಠೆಗಾಗಿ ಮಕ್ಕಳನ್ನು ಸಾಲ ಮಾಡಿ ಕಾನ್ವೆಂಟ್, ಖಾಸಗಿ ಕಾಲೇಜುಗಳಿಗೆ ಮಕ್ಕಳನ್ನು ಸೇರಿಸಬೇಡಿ ಎಂದು ಅರಕಲಗೂಡು ಶಾಸಕ ಎ.ಮಂಜು ಕಿವಿಮಾತು ಹೇಳಿದರು.

ತಾಲ್ಲೂಕಿನ ಕೆರಗೋಡು ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಪ್ರೌಢಶಾಲೆಗಳ ಸಂಯುಕ್ತವಾಗಿ ಗ್ರಾಮಸ್ಥರು ನೀಡಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕರಿಸುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಾನ್ವೆಂಟ್‌ಗೆ ಕಳುಹಿಸುತ್ತಿದ್ದೇವೆ ಎನ್ನುವುದನ್ನು ಹೊರುತುಪಡಿಸಿ ಖಾಸಗಿ ಶಾಲೆ, ಕಾಲೇಜುಗಳಿಗೂ, ಸರ್ಕಾರಿ ಶಾಲಾ-ಕಾಲೇಜುಗಳಿಗೂ ಬೇರ್‍ಯಾವ ವ್ಯತ್ಯಾಸ ಇರಲಾರದು. ಅವರು ಕಷ್ಟಪಟ್ಟು ಓದಿಸುತ್ತಾರೆ. ಇಲ್ಲಿ ಇಷ್ಟ ಪಟ್ಟು ಓದುವರು ಮುಂದುವರೆಯುತ್ತಾರೆ. ಅದೇ ಖಾಳಜಿಯನ್ನು ಇಲ್ಲೇ ಮಕ್ಕಳ ಪರಿವರ್ತನೆಗೆ ಶ್ರಮಿಸಬೇಕಿದೆ ಎಂದು





ಅವರ ಸಲಹೆ ನೀಡಿದರು.

ಕನಸು ಕಂಡರಷ್ಟೆ ನನಸು ಮಾಡಲು ಅಡಿಪಾಯವಾಗುತ್ತದೆ. ಹಿಮಾಲಯ ಹತ್ತುವ ಕನಸು ಕಂಡವರಿಗೆ ಬೆಟ್ಟ ಹತ್ತುವ ನನಸಾದರೂ ಸಾಧಿಸಲು ಸಾದ್ಯವಾಗುತ್ತದೆ. ಸರ್ಕಾರಿ ಶಾಲೆಯಲ್ಲಿ ಓದಿದವರೇ ಅತಿ ಹೆಚ್ಚು ಎತ್ತರದ ವ್ಯಕ್ತಿತ್ವ ಹೊಂದಿದ ನಿದರ್ಶನ ಇವೆ. ಮೊಬೈಲ್ ಕಲಿಕೆಗಷ್ಟೆ ಬಳಸಿ. ಬೇಡವಾದ ಬೆಟ್ಟಿಂಗ್ ಮತ್ಯಾವುದೇ ವಿಚಾರಕ್ಕೆ ಬಳಸದಿರಿ. ಇದೊಂದು ತಿರುವು ಪಡೆದು ಉತ್ತಮ ಭವಿಷ್ಯ ಕಟ್ಟಿಕೊಳ್ಳಲು ನಿಮ್ಮ ಗಟ್ಟಿ ಮನಸ್ಥಿತಿ ಬಹುಮುಖ್ಯವಾಗಿರುತ್ತದೆ ಎಂದು ತಿಳಿಸಿದರು.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಲಾಯಿತು.

ಗ್ರಾಮದ ಮುಖಂಡರುಗಳಾದ ವೀರಪ್ಪಾಜಿ, ರಾಮಸ್ವಾಮಿ, ಕೃಷ್ಣಸ್ವಾಮಿ, ಪ್ರಾಂಶುಪಾಲ ಕುಮಾರ್, ಪ್ರೌಢಶಾಲಾ ಮುಖ್ಯ ಉಪಾಧ್ಯಾಯ ರಾಮಯ್ಯ ಇನ್ನಿತರರು ಹಾಜರಿದ್ದರು.

# ದುಶ್ಚಟಗಳಿಂದ ದೂರವಾಗಿಸಲು ಶ್ರಮಿಸಿದ ಡಾ.ಮಹಾಂತ ಶಿವಯೋಗಿ ಶ್ರೀ

## ವ್ಯಸನ ಮುಕ್ತ ದಿನಾಚರಣೆಯಲ್ಲಿ ಬಸವ ಕೇಂದ್ರದ ಅಧ್ಯಕ್ಷ ಬಸವರಾಜ್

• ಪ್ರಜೋದಯ ವರದಿ

**ಹಾಸನ:** ಡಾ.ಮಹಾಂತ ಶಿವಯೋಗಿ ಶ್ರೀಗಳು ಪ್ರತಿ ಗ್ರಾಮಗಳಿಗೂ ಭೇಟಿ ನೀಡಿ ಜೋಳಿಗೆಯನ್ನು ಹಿಡಿಯುವ ಮೂಲಕ ದುಶ್ಚಟಗಳಾದ ಮದ್ಯಪಾನ, ತಂಬಾಕು, ಸಿಗರೇಟ್, ಬೀಡಿ, ಇತ್ಯಾದಿ ದುಶ್ಚಟಗಳನ್ನು ಜೋಳಿಗೆಗೆ ಹಾಕಿ ಇನ್ನು ಮುಂದೆ ಅವುಗಳಿಂದ ದೂರವಿರಿ ಎಂದು ಮನವಿ ಮಾಡಿ ವ್ಯಸನಗಳಿಂದ ಮುಕ್ತರಾಗಿಸುವ ಮಾದರಿ ಕೆಲಸ ಮಾಡಿದ್ದಾರೆ ಎಂದು ಬಸವ ಕೇಂದ್ರದ ಅಧ್ಯಕ್ಷ ಬಸವರಾಜ್ ತಿಳಿಸಿದ್ದಾರೆ.

ಶನಿವಾರ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಸಭಾಂಗಣದಲ್ಲಿ ಶ್ರೀ ಮ.ನಿ.ಪ್ರ ಡಾ. ಮಹಾಂತ ಶಿವಯೋಗಿ ಜನ್ಮ ದಿನಾಚರಣೆ ಅಂಗವಾಗಿ ಏರ್ಪಡಿಸಲಾಗಿದ್ದ ವ್ಯಸನ ಮುಕ್ತ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದಲ್ಲಿ ಅನೇಕ ಜನರು ದುಶ್ಚಟಗಳಿಗೆ ಬಲಿಯಾಗಿ ಆರ್ಥಿಕ ಸಂಕಷ್ಟದ ಜೊತೆಗೆ ಸಾಮಾಜಿಕ ಹಿನ್ನಡೆ ಕೂಡ ಅನುಭವಿಸುತ್ತಾರೆ. ಈ ನಿಟ್ಟಿನಲ್ಲಿ ಯುವ ಜನತೆ ದುಶ್ಚಟಗಳಿಂದ ದೂರವಿರಿ ಎಂದು ತಿಳಿಸಿದರು.

12 ನೇ ಶತಮಾನದ ವಚನಕಾರರ ಸನ್ಮಾರ್ಗದಲ್ಲಿ ನಡೆಯಬೇಕು, ದುಶ್ಚಟಗಳಿಗೆ ಒಳಗಾಗಿ ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುವುದು



ಅಲ್ಲದೆ ಹಲವಾರು ಸಂಸಾರ ಹಾಳಾಗುತ್ತಿವೆ. ಆದ್ದರಿಂದ ದುಶ್ಚಟಗಳನ್ನು ತ್ಯಜಿಸಬೇಕು. ಯಾವುದೇ ದುಶ್ಚಟಗಳಿಗೆ ಬಲಿಯಾಗದೆ ನಿಮ್ಮ ಆದರ್ಶಗಳು ಮುಂದಿನ ಪೀಳಿಗೆಗೆ ಪರಿಚಯಿಸುವ ಪ್ರಯತ್ನ ಮಾಡಬೇಕು ಹಾಗೂ ಸಮಾಜಕ್ಕೆ ಮಾದರಿಯಾಗುವಂತಹ ಕೆಲಸ ಮಾಡಬೇಕು ಎಂದರಲ್ಲದೆ, ಮಹಾಂತ ಶಿವಯೋಗಿಗಳು ವ್ಯಸನ ನಿರ್ಮೂಲನೆಗೆ ಮಾತ್ರ ಸೀಮಿತವಾಗಿರಲಿಲ್ಲ ಯಾವುದೇ ಜಾತಿ, ಮತ, ಧರ್ಮ, ಭೇದ-ಭಾವ ಇಲ್ಲದೆ ಮಕ್ಕಳಿಗೆ ಶಿಕ್ಷಣ, ವಸತಿ ನೀಡಿ ಸಮಾಜಕ್ಕೆ ಮಾದರಿಯಾಗಿದ್ದಾರೆ ಎಂದರು.

ಹಿಮ್ಸ್ ಮನೋ ವೈದ್ಯಕೀಯ ವಿಭಾಗ ಸಹಾಯಕ ಪ್ರಾಧ್ಯಾಪಕರಾದ ಡಾ|| ಭಾರತಿ ಅವರು ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿ ಮಾತನಾಡಿ, ಮಾನಸಿಕ ಸಮಸ್ಯೆಗಳು ಮನಸ್ಸಿನ ಮೇಲೆ ಮಾತ್ರವಲ್ಲದೇ ದೇಹದ ಮೇಲೆ ಹೆಚ್ಚು ಪರಿಣಾಮ ಬೀರುತ್ತವೆ ಅಂತಹ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಿ ಎಂದ ಅವರು, ಅವಶ್ಯಕತೆ ಇಲ್ಲದಿರುವ ವಸ್ತುವನ್ನು ಬಳಕೆ ಮಾಡಿದರೆ ದುಶ್ಚಟಗಳಿಗೆ ಒಳಗಾದಂತೆ ಆದ್ದರಿಂದ ಅವಶ್ಯಕತೆ ಇಲ್ಲದೆ ಇರುವ ಯಾವ ವಸ್ತುಗಳನ್ನು ಬಳಸಬಾರದು ಎಂದು ಹೇಳಿದರು.

ಪದೇ ಪದೇ ಕಾಫಿ, ಟೀ ಸೇವನೆ ಮಾಡುವುದು ಸಹ ಒಂದು ವ್ಯಸನವಾಗಿದೆ, ಮಂಕು ಬರುವ ಎಲ್ಲಾ ವಸ್ತುಗಳು ಸಹ ದೇಹಕ್ಕೆ ಹಾಗೂ ಜೀವಕ್ಕೆ ಹಾನಿಕಾರಕವಾಗಿರುತ್ತದೆ. ವಿದ್ಯಾರ್ಥಿಗಳು ತರಗತಿಯಲ್ಲಿ ದಿನ ದಿನ ಹೆಚ್ಚು ಗೈರು ಹಾಜರಾಗುವುದು ಇಂತಹ ಕೆಟ್ಟ ಚಟಗಳ ಮೊದಲ ಹಂತವಾಗಿರುತ್ತದೆ ಹಾಗೂ ಮದ್ಯಪಾನದಿಂದ ಮಾನಸಿಕ ಸಮಸ್ಯೆಗೆ ಒಳಗಾಗುತ್ತಾರೆ. ಆದ್ದರಿಂದ ದಿನದಿಂದ ದಿನಕ್ಕೆ ಕೆಟ್ಟ ಚಟಗಳು ಹೆಚ್ಚಾಗುತ್ತದೆ. ವಿದ್ಯಾರ್ಥಿಗಳ ಪ್ರತಿ ಬದಲಾವಣೆ ಶಿಕ್ಷಕರಿಗೆ ತಿಳಿಯುತ್ತದೆ ಇದನ್ನು ಸೂಕ್ಷ್ಮವಾಗಿ ಗಮನಿಸಿ ವಿದ್ಯಾರ್ಥಿಗಳಿಗೆ ದುಶ್ಚಟಗಳಿಂದ ದೂರವಿರುವಂತೆ ತಿಳುವಳಿಕೆ ನೀಡಬೇಕು. ದುಶ್ಚಟಗಳಿಂದ ಸಮಾಜದಲ್ಲಿ ಅನೇಕ ಅಪಘಾತ, ಕೊಲೆ ಪ್ರಕರಣಗಳು ಹೆಚ್ಚುತ್ತಿವೆ, ಒಮ್ಮೆ ವ್ಯಸನಗಳಿಗೆ ಒಳಗಾಗುವುದರಿಂದ ಕುಟುಂಬಗಳಲ್ಲಿ ಹಲವಾರು ಸಮಸ್ಯೆಗಳು ಉಂಟಾಗುತ್ತವೆ ಎಂದರು.

ಕಟ್ಟಾಯ ಶಿವಕುಮಾರ್ ಅವರು ಮಾತನಾಡಿ, ಅನೇಕ ವಿದ್ಯಾರ್ಥಿಗಳು ಮಾದಕ ವಸ್ತುಗಳಿಗೆ ಮಾರು ಹೋಗುತ್ತಿದ್ದಾರೆ, ಆದ್ದರಿಂದ ಶಿವಯೋಗಿಗಳ ಉದ್ದೇಶ ವ್ಯಸನ ಮುಕ್ತ ಸಮಾಜ ನಿರ್ಮಾಣ ಮಾಡಬೇಕು ಎಂಬುದು ಅವರ ಆಶಯವಾಗಿತ್ತು ಎಂದು ಹೇಳಿದರು.

ಪ್ರಾಂಶುಪಾಲ ಪ್ರದೀಪ್, ಜಿಲ್ಲಾ ವಾರ್ತಾಧಿಕಾರಿ ಮೀನಾಕ್ಷಮ್ಮ, ಡಿ.ಟಿ.ಶಿವಣ್ಣ, ಶ್ರೀನಿವಾಸ್, ಅನಿಲ್‌ಕುಮಾರ್ ಇನ್ನಿತರರು ಹಾಜರಿದ್ದರು.

# ಪಿವಿಸಿ ಪೈಪ್ ವಿತರಣೆಗೆ ಸಹಾಯಧನ

• ಪ್ರಜೋದಯ ವರದಿ

**ಸಕಲೇಶಪುರ:** ಕೃಷಿ ಕ್ಷೇತ್ರದಲ್ಲಿ ನೀರಿನ ಸಮರ್ಪಕ ಬಳಕೆ, ಸೂಕ್ಷ್ಮ ನೀರಾವರಿ ವ್ಯವಸ್ಥೆಗೆ ಉತ್ತೇಜನ ಹಾಗು ನೀರಿನ ಮಿತವ್ಯಯವನ್ನು ಪ್ರೋತ್ಸಾಹಿಸುವ ಉದ್ದೇಶದಿಂದ 2026-27ನೇ ಸಾಲಿನ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ಇತರೆ ಉಪಚಾರ ಕಾರ್ಯಕ್ರಮದಡಿ ಅರ್ಹ ರೈತರಿಗೆ ಸಹಾಯ ಧನದಲ್ಲಿ ಪಿವಿಸಿ ಪೈಪ್‌ಗಳನ್ನು ವಿತರಿಸಲಾಗುತ್ತಿದೆ ಎಂದು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ಯು.ಎಂ.ಪ್ರಕಾಶ್ ಕುಮಾರ್ ಅವರು ತಿಳಿಸಿದ್ದಾರೆ.

ಯೋಜನೆಯಡಿ 40 ಎಂಎಂ, 63 ಎಂಎಂ, 75 ಎಂಎಂ ಹಾಗು 90 ಎಂಎಂ ಗಾತ್ರದ, 4 ಕೆ.ಜಿ. ಸಾಂದ್ರತೆಯ ಗುಣಮಟ್ಟದ ಪಿವಿಸಿ ಪೈಪ್‌ಗಳು ಸಹಾಯಧನದಲ್ಲಿ ಲಭ್ಯವಿವೆ. ಆಸಕ್ತ ರೈತರು ತಮ್ಮ ಹೋಬಳಿ ವ್ಯಾಪ್ತಿಯ ರೈತ ಸಂಪರ್ಕ ಕೇಂದ್ರಗಳಿಗೆ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿ ಯೋಜನೆಯ ಸೌಲಭ್ಯವನ್ನು ಪಡೆಯುವಂತೆ ಅವರು ಮನವಿ ಮಾಡಿದ್ದಾರೆ.

ಕೃಷಿ ಉತ್ಪಾದಕತೆ ಹೆಚ್ಚಿಸುವುದು, ನೀರಿನ ಸಮರ್ಪಕ ಹಾಗೂ ಮಿತವ್ಯಯದ ಬಳಕೆಗೆ ಉತ್ತೇಜನ ನೀಡುವುದು ಮತ್ತು ರೈತರ ಆದಾಯವನ್ನು ವೃದ್ಧಿಸುವ ಉದ್ದೇಶದಿಂದ ಸರ್ಕಾರ ವಿವಿಧ ಕೃಷಿ ಯೋಜನೆಗಳನ್ನು



ಜಾರಿಗೊಳಿಸಿದೆ. ಈ ಯೋಜನೆಗಳ ಕುರಿತು ರೈತರಿಗೆ ನಿರಂತರವಾಗಿ ಮಾಹಿತಿ ನೀಡಲಾಗುತ್ತಿದ್ದು, ಪ್ರತಿಯೊಬ್ಬ ಅರ್ಹ ರೈತರೂ ಸರ್ಕಾರದ ಸೌಲಭ್ಯಗಳನ್ನು ಪಡೆಯುವಂತೆ ಇಲಾಖೆ ಜಾಗೃತಿ ಮತ್ತು ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಎಂದು ತಿಳಿಸಿದರು.

ಸಕಲೇಶಪುರದಂತಹ ಮಲೆನಾಡು ಪ್ರದೇಶದಲ್ಲಿ ರೈತರು ಸರ್ಕಾರಿ ಯೋಜನೆಗಳ ಸದುಪಯೋಗ ಪಡೆದು ಆಧುನಿಕ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು. ಕೃಷಿ ಇಲಾಖೆಯ ಮಾರ್ಗದರ್ಶನ ಹಾಗೂ ವಿವಿಧ ಇಲಾಖೆಗಳ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಂಡರೆ ಕೃಷಿಯನ್ನು ಇನ್ನಷ್ಟು ಲಾಭದಾಯಕವಾಗಿಸಬಹುದು.

ಕೃಷಿ ಇಲಾಖೆಯು ಪಾರದರ್ಶಕ ಆಡಳಿತ, ಯೋಜನೆಗಳ ಸಮರ್ಪಕ ಅನುಷ್ಠಾನ ಹಾಗೂ ಕೃಷಿ ಅಭಿವೃದ್ಧಿಗೆ ಅಗತ್ಯ ಮಾರ್ಗದರ್ಶನ ನೀಡುವ ಮೂಲಕ ರೈತರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಪ್ರತಿಯೊಬ್ಬ ಅರ್ಹ ರೈತನಿಗೂ ಸರ್ಕಾರದ ಸೌಲಭ್ಯ ತಲುಪುವಂತೆ ಕಾರ್ಯ ನಿರ್ವಹಿಸುತ್ತಿದೆ ಎಂದು ಅವರು ತಿಳಿಸಿದರು.





## ಕಲಾವಿದರಿಗೆ ಗುರುತಿನ ಚೀಟಿ ವಿತರಣೆ

• ಪ್ರಜೋದಯ ವರದಿ

**ಹಾಸನ:** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ರಾಜ್ಯಾದ್ಯಂತ ಎಲ್ಲಾ ಪ್ರಕಾರದ ಕಲೆಯ ನೋಂದಾಯಿಸಿಕೊಂಡಿರುವ ಕಲಾವಿದರಿಗೆ ಗುರುತಿನ ಚೀಟಿಯನ್ನು ವಿತರಿಸಲಾಗುತ್ತಿದೆ. ಅದರಂತೆ ಹಾಸನ ಜಿಲ್ಲೆಯ ಸುಮಾರು 400ಕ್ಕೂ ಹೆಚ್ಚು ಕಲಾವಿದರಿಗೆ ಗುರುತಿನ ಚೀಟಿಯನ್ನು ಹಾಸನಾಂಬ ಕಲಾಕ್ಷೇತ್ರದಲ್ಲಿ ವಿತರಿಸಲಾಯಿತು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಡಾ.ಹೆಚ್.ಪಿ. ತಾರಾನಾಥ್ ಅವರು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ತಹಶೀಲ್ದಾರ್ ಎಲ್.ಎಸ್.ರಮೇಶ್, ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯೆ ಮಮತಾ ಅರಸೀಕೆರೆ ಅವರು ಹಾಜರಿದ್ದರು. ನೋಂದಾಯಿಸಿಕೊಂಡಿರುವ ಜಿಲ್ಲೆಯ ಕಲಾವಿದರು ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ತಮ್ಮ ಗುರುತಿನ ಚೀಟಿಯನ್ನು ಪಡೆದುಕೊಂಡರು.

# ರಸ್ತೆ, ಚರಂಡಿ ಕಾಮಗಾರಿಗೆ ಸಂಸದ ಭೂಮಿಪೂಜೆ

• ಪ್ರಜೋದಯ ವರದಿ

**ಹೊಳೆನರಸೀಪುರ:** ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ನಗರದಲ್ಲಿ ಕಾಂಕ್ರೀಟ್ ರಸ್ತೆ ಹಾಗು ಚರಂಡಿ ಕಾಮಗಾರಿಗೆ ಸಂಸದ ಶ್ರೇಯಸ್ ಪಟೇಲ್ ಅವರು ಶನಿವಾರ ಭೂಮಿಪೂಜೆ ನೆರವೇರಿಸಿದರು.



ಬಳಿಕ ಮಾತನಾಡಿದ ಅವರು, ಕಾಮಗಾರಿಯನ್ನು ಶೀಘ್ರ ಆರಂಭಿಸಿ ನಿಗದಿತ ಅವಧಿ ಯೊಳಗೆ ಗುಣಮಟ್ಟದೊಂದಿಗೆ ಪೂರ್ಣ ಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದ ಅವರು, ಅಂಬೇಡ್ಕರ್ ನಗರದ ಸಮಗ್ರ ಅಭಿವೃದ್ಧಿಗೆ ಅಗತ್ಯವಿರುವ ಮೂಲ ಸೌಕರ್ಯ ಕಲ್ಪಿಸಲು ಪ್ರಾಮಾಣಿಕವಾಗಿ ಶ್ರಮಿಸುವುದಾಗಿ ಭರವಸೆ ನೀಡಿದರು.

ನಗರದ ಜನರು ನಮ್ಮ ಕುಟುಂಬವನ್ನು ತಮ್ಮ ಕುಟುಂಬವೆಂದು ಪ್ರೀತಿ ಮತ್ತು ವಿಶ್ವಾಸದಿಂದ ಕಾಣುತ್ತಿರುವುದು ಹೆಮ್ಮೆಯ ಸಂಗತಿ. ತಮ್ಮ ತಾತನ ಕಾಲದಿಂದಲೂ ಈ ಭಾಗದ ಜನರೊಂದಿಗೆ ಆತ್ಮೀಯ ಬಾಂಧವ್ಯವಿದ್ದು, ಅಂಬೇಡ್ಕರ್ ನಗರದೊಂದಿಗೆ ವಿಶೇಷ ನಂಟಿದೆ ಎಂದು ಹೇಳಿದರು. ಇದೇ ವೇಳೆ ಸಂಸದರನ್ನು ಗ್ರಾಮಸ್ಥರು ಸನ್ಮಾನಿಸಿ ಗೌರವಿಸಿದರು.

ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಟಿ.ಲಕ್ಷ್ಮಣ, ಮಾಜಿ ಅಧ್ಯಕ್ಷ ಆರ್. ರಂಗಸ್ವಾಮಿ, ಪುರಸಭೆ ಮುಖ್ಯಾಧಿಕಾರಿ ಯು.ಎನ್.ಶಿವಶಂಕರ, ಭೂ ಸೇನಾ ನಿಗಮದ ಅಧಿಕಾರಿಗಳಾದ ಅಶೋಕ್ ಮತ್ತು ಕೇಶವಮೂರ್ತಿ, ಕಾಂಗ್ರೆಸ್ ಎಸ್‌ಸಿ ಘಟಕದ ಅಧ್ಯಕ್ಷ ರಂಗಸ್ವಾಮಿ, ಡಾ.ಬಿ.ಆರ್. ಅಂಬೇಡ್ಕರ್ ಆಟೋ ಚಾಲಕರು ಮತ್ತು ಮಾಲೀಕರ ಸಂಘದ ಅಧ್ಯಕ್ಷ ಹೆಚ್.ಆರ್ .ಭೋಜ, ಕೆಡಿಪಿ ಸದಸ್ಯ ಕೆ.ಕೆ.ಲೋಕೇಶ್ ಉಪಸ್ಥಿತರಿದ್ದರು.

ಬೆಂಗಳೂರು: ಚನ್ನಮ್ಮ ದೇವೇಗೌಡರ ನಿಧನದಿಂದ ಮುಂದೂಡಿಕೆ ಆಗಿದ್ದ ಬಿಡದಿ ಟೌನ್‌ಶಿಪ್ ವಿರೋಧಿಸಿ ಜೆಡಿಎಸ್ ಪಾದಯಾತ್ರೆಗೆ ಹೊಸ ದಿನಾಂಕ ನಿಗದಿ ಮಾಡಲಾಗಿದ್ದು, ಆಗಸ್ಟ್ 9, 10, 11 ರಂದು ಪಾದಯಾತ್ರೆ ನಡೆಯಲಿದೆ.

ಹೊಸ ದಿನಾಂಕವನ್ನ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಘೋಷಣೆ ಮಾಡಿದ್ದಾರೆ.

**ಅರಕಲಗೂಡು ಗೌರವಾನ್ವಿತ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ಘನ ನ್ಯಾಯಾಲಯದಲ್ಲಿ**

**ಸಿಆರ್.ಮಿಸ್. 691/ 2026**

**ಅರ್ಜಿದಾರರು:**

**ಜಿ.ಮಂಜುನಾಥ ಬಿನ್ ಯೋಗಾನರಸಿಂಹ ಸುಮಾರು 70 ವರ್ಷ, ರಘುಪತಿಕೊಪ್ಪಲು, ರಾಮನಾಥಪುರ ಗ್ರಾಮ, ರಾಮನಾಥಪುರ ಹೋಬಳಿ, ಅರಕಲಗೂಡು ತಾಲ್ಲೂಕು.**

**ವಿರುದ್ಧ**

**ರೆಸ್ಪಾಂಡೆಂಟರು:ತಹಶೀಲ್ದಾರ್ ರವರು ಹಾಗೂ ಜನನ-ಮರಣ ನೋಂದಾಣಾಧಿಕಾರಿಗಳು ತಾಲ್ಲೂಕು ಕಚೇರಿ ಅರಕಲಗೂಡು. ಅರಕಲಗೂಡು ತಾಲ್ಲೂಕು.**

**ಪತ್ರಿಕಾ ಪ್ರಕಟಣೆ**

ಮೇಲ್ಕಂಡ ಅರ್ಜಿಯ ಅರ್ಜಿದಾರರ ತಂದೆಯಾದ ಯೋಗನರಸಿಂಹ ಬಿನ್ ಗೌರಿ ರಾಮಶಾಸ್ತ್ರಿ ರವರು ದಿನಾಂಕ: 23-09-1973 ರಂದು ಅರಕಲಗೂಡು ತಾಲ್ಲೂಕು, ರಾಮನಾಥಪುರ ಹೋಬಳಿ, ರಘುಪತಿಕೊಪ್ಪಲು ಗ್ರಾಮದಲ್ಲಿನ ಅರ್ಜಿದಾರರ ಮನೆಯಲ್ಲಿ ಮೃತರಾಗಿರುತ್ತಾರೆ. ಮೃತರ ಮರಣ ದೃಡೀಕರಣ ಪತ್ರದ ಅವಶ್ಯಕತೆ ಇದ್ದು, ಅದನ್ನು ಪಡೆಯುವ ಆದೇಶಕ್ಕಾಗಿ, ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಸದರಿ ಅರ್ಜಿಯನ್ನು ಸಲ್ಲಿಸಿದ್ದು ಸದರಿ ಅರ್ಜಿದಾರರು ಸಲ್ಲಿಸಿರುವ ಮೃತರ ಮರಣ ದಿನಾಂಕದ ಬಗ್ಗೆ ಯಾರಿಂದಲಾದರೂ ಆಕ್ಷೇಪಣೆಗಳು ಇದ್ದಲ್ಲಿ ಅರ್ಜಿಯ ವಿರುದ್ಧ ಕಾರಣವನ್ನು ತೋರಿಸಲು ದಿನಾಂಕ 29-09-2026ರಂದು ಪೂರ್ವಾಹ್ನ 11 ಗಂಟೆಗೆ ನೀವುಗಳು ಹಾಜರಾಗಿ ನೀವಾಗಲೀ ಅಥವಾ ನಿಮ್ಮ ವಕೀಲರುಗಳ ಮೂಲಕವಾಗಲೀ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆಂದು ಇದಕ್ಕೆ ತಪ್ಪಿದ್ದರೆ ಸದರಿ ಅರ್ಜಿಯನ್ನು ಏಕಪಕ್ಷಿಯವಾಗಿ ವಿಚಾರಣೆ ಮಾಡಲಾಗುವುದೆಂದು ಈ ಮೂಲಕ 2026 ನೇ ವರ್ಷದ ಜುಲೈ ತಿಂಗಳಿನ 24ರ ದಿನಾಂಕದಂದು ಇದನ್ನು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು (ನಾಗರಾಜ ಎಂ.ಎಸ್.)
ದಿನಾಂಕ: 24-07-2026

ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೇದಾರರು
ಅರಕಲಗೂಡು ಸಿವಿಲ್ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಅರಕಲಗೂಡು

# ತಮಿಳುನಾಡಿಗೆ ನೀರು: ರಾಜ್ಯಕ್ಕೆ ಘೋರ ಅನ್ಯಾಯ

• ಆರ್. ಶ್ರೀನಿವಾಸ್ ಉಳ್ಳಾವಳ್ಳಿ

**ಚನ್ನರಾಯಪಟ್ಟಣ:** ಜಿಲ್ಲೆಯಲ್ಲಿ ಮಳೆ ಕೊರತೆಯಿಂದ ಬೆಳೆಗಳು ಹಾಳಾಗಿರುವುದು ಮಾತ್ರವಲ್ಲದೆ ಕುಡಿಯುವ ನೀರಿಗೆ ತತ್ವಾರ ಎದುರಾಗುವ ಸಾಧ್ಯತೆಯಿದೆ.

ಜಿಲ್ಲೆಯ ಜೀವನಾಡಿ ಹೇಮಾವತಿ ಜಲಾಶಯವು ನಿರೀಕ್ಷೆಯಂತೆ ಭರ್ತಿಯಾಗಿಲ್ಲ. ಇಂತಹ ಸಮಯದಲ್ಲಿ ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ನಿತ್ಯ 3,500 ಕ್ಯೂಸೆಕ್ ನೀರು ಹರಿಸುವಂತೆ ಆದೇಶಿಸಿರುವುದು ಮೈಸೂರು ಭಾಗದ ರೈತರ ಪಾಲಿಗೆ ಮರಣ ಶಾಸನವಾಗಿದೆ.

ರಾಜ್ಯ ಸರ್ಕಾರ ಈ ಬಗ್ಗೆ ಮೇಲ್ಮನವಿ, ಸರ್ವಪಕ್ಷ ಸಭೆ, ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರ ಬೆಂಗಳೂರು ಭೇಟಿ ಕಾರ್ಯಕ್ರಮವನ್ನು ಮುಂದೂಡಿ ಕೆಲವು ತ್ವರಿತ ನಿರ್ಧಾರಗಳನ್ನು ಕೈಗೊಂಡಿದೆ ಯಾದರೂ ಯಾವುದೋ ಒತ್ತಡಕ್ಕೆ ಮಣಿದು ನೀರು ಹರಿಸಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ.

ತಮಿಳುನಾಡಿಗೆ ನೀರು ಹರಿಸುವ ಮೊದಲು ಸ್ಥಳೀಯರ ಹಿತವನ್ನು ಕಾಪಾಡಬೇಕೆಂಬ ಆಗ್ರಹ ವ್ಯಾಪಕವಾಗಿ ಕೇಳಿಬಂದಿದೆ. ಹೇಮಾವತಿ ಜಲಾಶಯದಿಂದ ನೀರು ಹರಿಸುವುದಾದರೆ ಮೊದಲು ಹಾಸನ, ತುಮಕೂರು ಹಾಗು ಮಂಡ್ಯ ಜಿಲ್ಲೆಯ ನಾಲೆಗಳಿಗೆ ಹರಿಸಬೇಕು. ಇಲ್ಲವಾದರೆ ಜಲಾಶಯದಿಂದ ಒಂದು ಹನಿ ನೀರು ಹೊರ ಹೋಗಬಾರದು ಎಂಬುದು ರೈತರ ಒತ್ತಾಯವಾಗಿದೆ.

ಮಳೆ ಕೊರತೆ ಪರಿಣಾಮ ಕೆರೆ ಕಟ್ಟೆಗಳು ಭಣಗುಡುತ್ತಿವೆ. ಕುಡಿಯುವ ನೀರಿನ ಅಭಾವ ಎದುರಾಗಿದೆ. ಕೃಷಿ ಚಟುವಟಿಕೆ ಹಿನ್ನಡೆ, ಜಾನುವಾರುಗಳಿಗೆ ಮೇವು ಹಾಗು ನೀರಿನ ಹಾಹಾಕಾರ ಮತ್ತು ತಲೆದೂರಿರುವ ಬರ ಪರಿಸ್ಥಿತಿ ಕುರಿತು ತಾಲ್ಲೂಕಿನ ವಿವಿಧ ಸಂಘಟನೆಗಳ ಮುಖಂಡರು ಹಾಗು ರೈತರು ತಮ್ಮ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ರಾಜ್ಯದಲ್ಲಿ ವಾಡಿಕೆಯಂತೆ ಮಳೆ ಆಗಿಲ್ಲ. ಜಲಾಶಯಗಳು ನಿರೀಕ್ಷೆಯಂತೆ ಭರ್ತಿಯಾಗಿಲ್ಲ. ಇಂತಹ ಸಮಯದಲ್ಲಿ ತಮಿಳುನಾಡಿಗೆ ನೀರು ಹರಿಸುವಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರವು ಸಜ್ಜಾಗುತ್ತಿರುವುದು ತರವಲ್ಲ. ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ದಿ.ಜಯಲಲಿತ ಅವರು ಇದ್ದ ಕಾಲದಲ್ಲಿಯೂ ಸಹ ಕಾವೇರಿ ನೀರಿಗಾಗಿ ಕ್ಯಾತೆ ತೆಗೆಯುತ್ತಿದ್ದರು. ಈಗ ವಿಜಯ್ ಮುಖ್ಯಮಂತ್ರಿ ಆಗಿದ್ದು ಮತ್ತೆ ಅದೇ ದಾರಿಯಲ್ಲಿ ಸಾಗುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ. ತಮಿಳುನಾಡು ಸರ್ಕಾರ 4 ಟಿಎಂಸಿ ನೀರು ಕೇಳಿದೆ. ರಾಜ್ಯದಲ್ಲಿ ಮಳೆಯಾಗದೆ ಬರ ಪರಿಸ್ಥಿತಿ ನಿರ್ಮಾಣವಾಗಿರುವುದನ್ನು ಅವರು ಮನಗಾಣಬೇಕು. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ರಾಜ್ಯದ ಬರ ಪರಿಸ್ಥಿತಿಯ ಬಗ್ಗೆ ಮನವರಿಕೆ ಮಾಡಬೇಕೆ ಹೊರತು ತಮಿಳುನಾಡಿಗೆ ಮಣಿದು ನೀರು ಹರಿಸಲು ಮುಂದಾದರೆ ವಿವಿಧ ಸಂಘಟನೆಗಳು ಹಾಗು ರೈತರು ಹೋರಾಟ ಮಾಡಬೇಕಾಗುತ್ತದೆ.



– **ನಾಗರತ್ನಮ್ಮ,** ರಾಜ್ಯ ರೈತ ಸಂಘ ಮಹಿಳಾ ಘಟಕ ತಾಲ್ಲೂಕು ಅಧ್ಯಕ್ಷೆ

**ರಾಜ್ಯದಲ್ಲಿ ಇನ್ನೂ ಮೂರು ದಿನಗಳ ಕಾಲ ಮಳೆ ಸೂಚನೆ**



ತಮಿಳುನಾಡಿಗೆ ನೀರು ಹರಿಸುವುದಾದರೆ ನಮ್ಮ ಹೇಮಾವತಿ ನಾಲೆಯಿಂದಲೂ ಸಹ ಹಾಸನ, ತುಮಕೂರು ಹಾಗು ಮಂಡ್ಯ ಜಿಲ್ಲೆಗೆ ನೀರು ಹರಿಸುವ ಮೂಲಕ ರೈತರನ್ನು ಉಳಿಸುವಲ್ಲಿ ಮುಂದಾಗಬೇಕು. ಇಲ್ಲವಾದರೆ ಜಿಲ್ಲಾಡಳಿತವೇ ನೇರ ಹೊಣೆ ಹೊರಬೇಕಾಗುತ್ತದೆ. ಈಗಾಗಲೇ ವಾಡಿಕೆಯಂತೆ ಮಳೆ ಇಲ್ಲದೆ ರೈತರ ಬದುಕು ಬುಡಮೇಲಾಗುತ್ತಿದೆ. ರಾಜ್ಯ ಸರ್ಕಾರವು ನ್ಯಾಯಾಲಯದ ಮೆಟ್ಟಿಲೇರಿ ಬರ ಪರಿಸ್ಥಿತಿ ಬಗ್ಗೆ ದಾಖಲಾತಿ ಒದಗಿಸಿ ನೀರನ್ನು ತಮಿಳುನಾಡಿಗೆ ಹರಿಸದಂತೆ ನೋಡಿಕೊಳ್ಳುವ ಜವಾಬ್ದಾರಿ ವಹಿಸಬೇಕು.

– **ಮಡಬ ಮಂಜು,** ತಾಲ್ಲೂಕು ರೈತ ಸಂಘ ಅಧ್ಯಕ್ಷ




ರಾಜ್ಯದಲ್ಲಿ ಸುಭಿಕ್ಷವಾಗಿ ಮಳೆ ಸುರಿದು ಜಲಾಶಯಗಳು ತುಂಬಿದರೆ ಮಾತ್ರ ತಮಿಳುನಾಡಿಗೆ ನಿಯಮದಂತೆ ನೀರು ಹರಿಸಲಿ. ಆದರೆ ನಮ್ಮಲ್ಲಿಯೇ ಬರ ಪರಿಸ್ಥಿತಿ ತಾಂಡವಾಡುತ್ತಿದೆ. ಇಂತಹ ಸಮಯದಲ್ಲಿ ನೀರು ಹರಿಸುವುದು ಯಾವ ನ್ಯಾಯ. ಮೇಕೆದಾಟು ಯೋಜನೆ ಕಾರ್ಯರೂಪಗೊಂಡರೆ ಎರಡು ರಾಜ್ಯಗಳಿಗೂ ಅನುಕೂಲವಾಗಲಿದೆ. ಇನ್ನು ರಾಜ್ಯದಲ್ಲಿ ಪ್ರಾದೇಶಿಕ ಪಕ್ಷ ಆಡಳಿತದಲ್ಲಿದ್ದರೆ ಏಕಪಕ್ಷಿಯ ತೀರ್ಮಾನ ಕೈಗೊಳ್ಳಬಹುದು. ಆದರೆ ಕಾಂಗ್ರೆಸ್ ಸರ್ಕಾರವು ಹೈಕಮಾಂಡ್ ನಿರ್ಣಯಕ್ಕೆ ತಲೆಬಾಗಬೇಕಾಗುತ್ತದೆ. ಇದರಿಂದ ರಾಜ್ಯಕ್ಕೆ ನಷ್ಟ ಪಕ್ಕದ ರಾಜ್ಯಕ್ಕೆ ಲಾಭವಾಗುವುದು ಖಚಿತ.

– **ಹೆಚ್.ಎಸ್.ಮಹೇಶ್,** ಜೆಡಿಎಸ್ ಮುಖಂಡ




ಮಳೆ ಇಲ್ಲದೆ ಬರ ಪರಿಸ್ಥಿತಿ ಎದುರಾದಾಗ ನೀರು ಹಂಚಿಕೆಯ ವಿಚಾರದಲ್ಲಿ ಕೆಲ ನಿಯಮಗಳು ಅನ್ವಯವಾಗಬೇಕು. ನ್ಯಾಯಾಲಯದ ಆದೇಶಕ್ಕೆ ನಾವು ತಲೆಬಾಗುತ್ತೇವೆ. ಆದರೆ ನಮಗೆ ಕುಡಿಯಲು ನೀರಿಲ್ಲ ಎಂಬುದನ್ನು ನ್ಯಾಯಾಲಯ ಹಾಗು ನಿರ್ವಹಣಾ ಮಂಡಳಿಯು ಸಹ ಗಮನ ಹರಿಸಬೇಕು. ಮಳೆಯಾಗದೆ ಕರ್ನಾಟಕದ ಜಲಾಶಯದಲ್ಲಿ ನಿರೀಕ್ಷೆಯಂತೆ ನೀರು ಇಲ್ಲದ ವೇಳೆ ಪಕ್ಕದ ತಮಿಳುನಾಡು ಸರ್ಕಾರವು ತಮಗೆ ನೀರು ಹರಿಸುವಂತೆ ಒತ್ತಾಯಿಸುವುದು ಸೂಕ್ತವಲ್ಲ.

–**ಸುಬ್ರಹ್ಮಣಿ,** ಸಾವಯವ ಕೃಷಿಕ



ಆಗಸ್ಟ್ ತಿಂಗಳು ಸಮೀಪಿಸಿದರೂ ಸಹ ಹೇಮಾವತಿ ಜಲಾಶಯದಲ್ಲಿ ಕೇವಲ 23 ಟಿಎಂಸಿ ನೀರಿದೆ. ಈ ವರ್ಷ ವಾಡಿಕೆಯಂತೆ ಮಳೆಯಾಗಿಲ್ಲ ಎಂಬುದು ಸ್ಪಷ್ಟವಾಗಿದೆ. ಈ ವೇಳೆಗಾಗಲೇ ಜಲಾಶಯದಲ್ಲಿ 33 ಟಿಎಂಸಿ ನೀರು ಸಂಗ್ರಹವಾಗಬೇಕಿತ್ತು. ಇಲ್ಲಿ ಕೆರೆಕಟ್ಟೆಗಳಲ್ಲಿ ನೀರಿಲ್ಲ. ಜನ ಜಾನುವಾರುಗಳಿಗೆ ನೀರಿಲ್ಲ. ಹೇಮಾವತಿ ನೀರಿನಿಂದ 3 ಜಿಲ್ಲೆಯ ಜನರು ಬದುಕಬೇಕು. ಪ್ರಸಕ್ತ ಬರ ಪರಿಸ್ಥಿತಿಯನ್ನು ಮೀರಿ ಪಕ್ಕದ ರಾಜ್ಯಕ್ಕೆ ನೀರು ಹರಿಸಿದರೆ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ.

–**ರಾಜಕುಮಾರ್,** ಗೌರವಾಧ್ಯಕ್ಷ, ಭೂಮಿ ಕ್ಷೇಮಾಭಿವೃದ್ಧಿ ಸಂಘ



ಬಲವಂತದ ಭೂಸ್ವಾಧೀನ ಕಾರ್ಯಗಳನ್ನು ಬದಿಗೊತ್ತಿ ರೈತರ ಹಿತಾಸಕ್ತಿ ಕಾಪಾಡುವಲ್ಲಿ ರಾಜ್ಯ ಸರ್ಕಾರ ಮುಂದಾಗಬೇಕು. ಜನರ ಹಿತ ಕಾಪಾಡುವ ಮನಸ್ಸಿದ್ದರೆ ರಾಜ್ಯ ಸರ್ಕಾರವು ನೀರನ್ನು ತಮಿಳುನಾಡಿಗೆ ಹರಿಸದೆ ಕಾನೂನು ಹೋರಾಟ ಮಾಡಬೇಕು. ಕಳೆದ ಒಂದು ವಾರದಿಂದ ಹೋರಾಟ ಮಾಡುತ್ತಿದ್ದರೂ ಸಹ ರಾಜ್ಯ ಸರ್ಕಾರದಿಂದ ಕವಡೆ ಕಾಸಿನ ಕಿಮ್ಮತ್ತು ಇಲ್ಲದಾಗಿದೆ. ಇಲ್ಲಿನ ಬರ ಪರಿಸ್ಥಿತಿಯ ಬಗ್ಗೆ ಕೇಂದ್ರ ಹಾಗು ತಮಿಳುನಾಡು ಸರ್ಕಾರದ ಗಮನಕ್ಕೆ ತಂದು ಕೆಲಸ ಮಾಡಬೇಕಿದೆ.

–**ಹರೀಶ್,** ರೈತ ಮುಖಂಡ, ಬಾಗೂರು.

**: ಸಾರ್ವಜನಿಕ ಪ್ರಕಟಣೆ :-**

**ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ. ದುಷ್ಯಂತ ವಿ S/O ವಸಂತ ಶ್ರೀ ಲಕ್ಷ್ಮಿ ಫೈನಾನ್ಸ್, #2815,ಹಳೇ ಅಂಚೆ ಕಛೇರಿ ರಸ್ತೆ,ವಾಣಿ ವಿಲಾಸ ಶಾಲೆಯ ಹಿಂಭಾಗ ಹಾಸನ ಎಂಬ ಸಂಸ್ಥೆಯು ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ಲೇವಾದೇವಿ ನಿಬಂಧಕರು, ಹಾಸನ ಜಿಲ್ಲೆ ರವರಿಂದ ಪರವಾನಗಿಸಂಖ್ಯೆ:1545 ದಿನಾಂಕ:13-02-2020 ನ್ನು ಹೊಂದಿ ಲೇವಾದೇವಿ /ಗಿರವಿ ವ್ಯವಹಾರವನ್ನು ನಡೆಸುತ್ತಿದ್ದು, ಪ್ರಸ್ತುತ ವೈಯಕ್ತಿಕ ಕಾರಣದಿಂದ ಈ ಸಂಸ್ಥೆಯನ್ನು ದಿನಾಂಕ:13-02-2020ರಿಂದ ಸ್ಥಗಿತಗೊಳಿಸಿ ಸಂಸ್ಥೆಯ ಪರವಾನಗಿಯನ್ನು ರದ್ದುಗೊಳಿಸಲು ಇಚ್ಛಿಸಿರುತ್ತೇನೆ. ಆದ ಕಾರಣ ಈ ಸಂಸ್ಥೆಗೆ ಸಂಬಂಧಿಸಿದ ವ್ಯವಹಾರಗಳಿದ್ದರೆ ಸಂಬಂಧಪಟ್ಟ ಸಂಸ್ಥೆಯ ಮೂಲಕ ಈ ಪ್ರಕಟಣೆಯ ದಿನಾಂಕದಿಂದ 7 ದಿನಗಳ ಒಳಗೆ ಇತ್ಯರ್ಥಪಡಿಸಿಕೊಳ್ಳುವುದು. ನಂತರ ಬಂದ ಗ್ರಾಹಕರಿಗೆ ಸಂಸ್ಥೆಯು ಜವಾಬ್ದಾರರಾಗುವುದಿಲ್ಲ ಎಂದು ತಿಳಿಯಪಡಿಸುತ್ತೇವೆ.**

**ಸಹಿ/- ದುಷ್ಯಂತ ವಿ (ಮಾಲೀಕರ ಹೆಸರು)**

# ಅಕ್ರಮ, ಪಕ್ಷಪಾತವಿಲ್ಲದೆ ಅರ್ಹರಿಗೆ ನಿವೇಶನ ಹಂಚಿಕೆ

## ಪಾರದರ್ಶಕವಾಗಿ ಫಲಾನುಭವಿಗಳ ಆಯ್ಕೆ | ಶಾಸಕ ಹೆಚ್.ಕೆ.ಸುರೇಶ್ ಭರವಸೆ

• ಪ್ರಜೋದಯ ವರದಿ

**ಬೇಲೂರು:** ನಿವೇಶನ ರಹಿತ ಬಡ ಕುಟುಂಬಗಳಿಗೆ ಆಶ್ರಯ ಯೋಜನೆಯಡಿ ನಿವೇಶನ ಹಂಚಿಕೆ ಪ್ರಕ್ರಿಯೆಯನ್ನು ಸಂಪೂರ್ಣ ಪಾರದರ್ಶಕವಾಗಿ ಹಾಗು ಕಾನೂನು ಮತ್ತು ಸಂವಿಧಾನದ ಚೌಕಟ್ಟಿನೊಳಗೆ ನಡೆಸಿ, ಅರ್ಹ ಫಲಾನುಭವಿಗಳಿಗೆ ತಾರತಮ್ಯವಿಲ್ಲದೆ ನ್ಯಾಯಯುತವಾಗಿ ನಿವೇಶನ ವಿತರಿಸಲಾಗುವುದೆಂದು ಶಾಸಕ ಹೆಚ್.ಕೆ.ಸುರೇಶ್ ಅವರು ಹೇಳಿದರು.

ಪಟ್ಟಣದ ಪುರಸಭೆ ಅಧ್ಯಕ್ಷರ ಕಚೇರಿಯಲ್ಲಿ ಶನಿವಾರ ನಡೆದ ಆಶ್ರಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಆಶ್ರಯ ನಿವೇಶನಗಳಿಗೆ ಸಂಬಂಧಿಸಿದ ಅರ್ಜಿಗಳನ್ನು ಈಗಾಗಲೇ ಸ್ವೀಕರಿಸಲಾಗಿದ್ದು, ಪುರಸಭೆ ಸಿಬ್ಬಂದಿಯಿಂದ ಪರಿಶೀಲನೆ ಕಾರ್ಯ ನಡೆಯುತ್ತಿದೆ. ಯಾವುದೇ ರೀತಿಯ ಅಕ್ರಮ, ಪಕ್ಷಪಾತ ಅಥವಾ ಮಧ್ಯವರ್ತಿಗಳಿಗೆ ಅವಕಾಶ ನೀಡದೆ ಅರ್ಹರನ್ನು ಆಯ್ಕೆ ಮಾಡಲಾಗುವುದೆಂದು ತಿಳಿಸಿದರು.

ಬೇಲೂರು ವಿಧಾನಸಭಾ ಕ್ಷೇತ್ರದಲ್ಲಿ ಲಭ್ಯವಿರುವ 135 ಆಶ್ರಯ ನಿವೇಶನಗಳನ್ನು ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡಲು ಅಗತ್ಯ ಸಿದ್ಧತೆ ಪೂರ್ಣಗೊಂಡಿದೆ. ಅರ್ಜಿ ಸಲ್ಲಿಸುವ ಪ್ರಕ್ರಿಯೆ ಸಂಪೂರ್ಣ ಉಚಿತವಾಗಿದ್ದು, ಯಾವುದೇ ರೀತಿಯ ಶುಲ್ಕ ಪಾವತಿಸುವ ಅಗತ್ಯವಿಲ್ಲ. ಗುಡಿಸಲು ಮುಕ್ತ ಅಭಿಯಾನಕ್ಕೆ ಶೀಘ್ರ ಚಾಲನೆ ನೀಡಲಾಗುವುದು. ಮೊದಲ ಹಂತದಲ್ಲಿ 65 ಫಲಾನುಭವಿಗಳನ್ನು ಲಾಟರಿ (ಚೀಟಿ ಎತ್ತುವ) ಪದ್ಧತಿಯ ಮೂಲಕ ಆಯ್ಕೆ ಮಾಡಿ, ಪಾರದರ್ಶಕವಾಗಿ ನಿವೇಶನ ಹಂಚಿಕೆ ಮಾಡಲಾಗುವುದೆಂದು ಹೇಳಿದರು.

ರಾಯಪುರ ಹಾಗು ಬಂಟೇನಹಳ್ಳಿ ಗ್ರಾಮಗಳಲ್ಲಿನ 231 ನಿವೇಶನಗಳಿಗೆ ಸಂಬಂಧಿಸಿದ ಪ್ರಕರಣ ನ್ಯಾಯಾಲಯದಲ್ಲಿ ಜನರ ಪರವಾಗಿ ಇತ್ಯರ್ಥಗೊಂಡಿದೆ. ಆ ನಿವೇಶನಗಳನ್ನು ಅರ್ಹ ಬಡ ಕುಟುಂಬಗಳಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಸಂಬಂಧ ತಹಶೀಲ್ದಾರ್ ಹಾಗು ಪುರಸಭೆ ಮುಖ್ಯಾಧಿಕಾರಿಗಳ ನೇತೃತ್ವದಲ್ಲಿ ತಂಡ ರಚಿಸಿ ಅಗತ್ಯ ಮಾಹಿತಿ ಸಂಗ್ರಹಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ ಎಂದರು.

ಆಶ್ರಯ ಸಮಿತಿ ಸದಸ್ಯ ಬಿ.ಸಿ.ಹರೀಶ್ ಅವರು ಮಾತನಾಡಿ, ಹೊಯ್ಸಳ ಕಾಲೇಜು ಆವರಣ ಸೇರಿ ವಿವಿಧ ಸರ್ಕಾರಿ ಜಾಗಗಳು ಒತ್ತುವರಿಯಾಗಿವೆ ಎಂದು ಆರೋಪಿಸಿ, ತಕ್ಷಣ ತೆರವುಗೊಳಿಸುವಂತೆ ಒತ್ತಾಯಿಸಿದರು. ಪುರಸಭೆ ಆಸ್ತಿಯನ್ನು ಯಾವುದೇ ಕಾರಣಕ್ಕೂ ಕಳೆದು ಕೊಳ್ಳದಂತೆ ಅಧಿಕಾರಿಗಳು ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕೆಂದು ಮನವಿ ಮಾಡಿದರು.

ಅದಕ್ಕೆ ಪ್ರತಿಕ್ರಿಯಿಸಿದ ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ, ಸುಮಾರು 20 ಗುಂಟೆ ಸರ್ಕಾರಿ ಜಾಗಕ್ಕೆ ಸಂಬಂಧಿಸಿದ ಸ್ಥಳ ಪರಿಶೀಲನೆ ಪೂರ್ಣಗೊಂಡಿದೆ ಎಂದು ಮಾಹಿತಿ ನೀಡಿದರು. ಈ ವೇಳೆ ಮಧ್ಯಪ್ರವೇಶಿಸಿದ ಶಾಸಕರು, ಸರ್ಕಾರಿ ಜಾಗವನ್ನು ಗುರುತಿಸಿ ಆ.8 ರೊಳಗೆ ವಶಕ್ಕೆ ಪಡೆದು ಸಾರ್ವಜನಿಕ ಹಿತಾಸಕ್ತಿಯನ್ನು ಕಾಪಾಡುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಪುರಸಭೆಯ 18 ಮಳಿಗೆಗಳ ಹಂಚಿಕೆ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಸಾರ್ವಜನಿಕರ ದೂರುಗಳ ಹಿನ್ನಲೆ ಸಂಬಂಧಿಸಿದ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ. ಪ್ರಕರಣದ ಸಂಪೂರ್ಣ ಮಾಹಿತಿ ಹಾಗು ಹೊಣೆಗಾರರ ವಿವರವನ್ನು ಸಲ್ಲಿಸುವಂತೆ ಪುರಸಭೆ ಮುಖ್ಯಾಧಿಕಾರಿಗೆ ನಿರ್ದೇಶನ ನೀಡಿದರು.

ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ, ಆಶ್ರಯ ಸಮಿತಿ ಸದಸ್ಯರಾದ ಮಹಮ್ಮದ್ ಇಕ್ಬಾಲ್, ಡಿಂಪಲ್ ರಾಣಿ, ನಾಗರಾಜ್, ಪುರಸಭೆ ಮುಖ್ಯಾಧಿಕಾರಿ ಬಸವರಾಜ ಟಾಕಪ್ಪ ಶಿಗ್ಗಾವಿ, ಪುರಸಭೆ ಅಧಿಕಾರಿಗಳು ಉಪಸ್ಥಿತರಿದ್ದರು.



### ಲಾಟರಿ ಮೂಲಕ ಫಲಾನುಭವಿಗಳ ಆಯ್ಕೆ

ಆಶ್ರಯ ಯೋಜನೆಯಡಿ ಬಡ ಹಾಗು ನಿವೇಶನ ರಹಿತ ಕುಟುಂಬಗಳಿಗೆ ನಿವೇಶನ ಹಂಚಿಕೆ ಪ್ರಕ್ರಿಯೆಯನ್ನು ಸಂಪೂರ್ಣ ಪಾರದರ್ಶಕವಾಗಿ ನಡೆಸಲು ತೀರ್ಮಾನಿಸಲಾಗಿದೆ. ಮೊದಲ ಹಂತದಲ್ಲಿ 65 ಫಲಾನುಭವಿಗಳನ್ನು ಲಾಟರಿ ಪದ್ಧತಿಯ ಮೂಲಕ ಆಯ್ಕೆ ಮಾಡಿ ಸೈಟ್ ಹಂಚಿಕೆ ಮಾಡಲಾಗುವುದು. ನ್ಯಾಯಾಲಯದ ತೀರ್ಪಿನ ಬಳಿಕ ರಾಯಪುರ ಹಾಗು ಬಂಟೇನಹಳ್ಳಿ ಗ್ರಾಮಗಳ 231 ನಿವೇಶನಗಳನ್ನು ಅರ್ಹರಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇದೇ ವೇಳೆ ಸರ್ಕಾರಿ ಜಾಗಗಳ ಒತ್ತುವರಿ ತೆರವು ಹಾಗೂ ಪುರಸಭೆ ಮಳಿಗೆಗಳ ಹಂಚಿಕೆಯಲ್ಲಿ ಅಕ್ರಮ ಗಳ ಕುರಿತು ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಶಾಸಕ ಹೆಚ್.ಕೆ.ಸುರೇಶ್ ಅವರು ಸ್ಪಷ್ಟಪಡಿಸಿದ್ದಾರೆ.

> ಪುರಸಭೆ ವ್ಯಾಪ್ತಿಯ ಎಲ್ಲಾ 23 ವಾರ್ಡ್‌ಗಳ ಬಡವರಿಗೆ ಸಮಾನ ಅವಕಾಶ ಕಲ್ಪಿಸಿ ಆಶ್ರಯ ನಿವೇಶನಗಳನ್ನು ಹಂಚಿಕೆ ಮಾಡಬೇಕು. ಜನವಸತಿ ಪ್ರದೇಶಗಳ ನಡುವೆ ಕಾರ್ಯನಿರ್ವಹಿಸು ತ್ತಿರುವ ಕೋಳಿ ಅಂಗಡಿಗಳನ್ನು ಒಂದೇ ಸ್ಥಳಕ್ಕೆ ಸ್ಥಳಾಂತರಿಸುವ ಅಗತ್ಯವಿದೆ.
> -ಅಕ್ರಂ ಶರೀಫ್, ಪುರಸಭೆ ಅಧ್ಯಕ್ಷ

## ಪತ್ನಿಯನ್ನು ಕೊಂದು ಪತಿಯೂ ಆತ್ಮಹತ್ಯೆ

» ಮೊದಲನೇ ಪುಟದಿಂದ

ನನ್ನ ಪತ್ನಿಗೆ ಬೇರೊಬ್ಬನ ಜೊತೆ ಅಕ್ರಮ ಸಂಬಂಧವಿದ್ದು, ನಾನು ಈ ವಿಷಯ ಹೇಳಬಾರದೆಂದು ಮೌನವಾಗಿದ್ದೆ. ಅವಳು ಅಕ್ರಮ ಸಂಬಂಧ ಹೊಂದಿದ್ದಕ್ಕೆ ಕೊಲೆ ಮಾಡಿದ್ದೇನೆ. ನನ್ನನ್ನು ದೂರ ಮಾಡಿ, ನಾನು ಮನೆಯಲ್ಲಿ ಇಲ್ಲದ ವೇಳೆ ಅವನನ್ನು ಬರಲು ಹೇಳುತ್ತಿದ್ದಳು, ನನ್ನ ಮನೆ, ಸಂಸಾರ ಎಂದು ಇಷ್ಟು ದಿನ ತಡೆದು ಕೊಂಡು ಸುಮ್ಮನಿದ್ದೆ ಎಂದಿದ್ದಾನೆ.

ಅವನಿಗೆ ವಿಡಿಯೋ ಕಾಲ್ ಮಾಡುತ್ತಿದ್ದಳು, ನನ್ನನ್ನು ಹತ್ತಿರಕ್ಕೆ ಸೇರುತ್ತಿರಲಿಲ್ಲ. ನಾನು ಊರಿಗೆ ಹೋದರೆ ಅವನನ್ನು ಮನೆಗೆ ಕರೆಸಿಕೊಳ್ಳುತ್ತಿದ್ದಳು. ಮರ್ಯಾದೆಗೆ ಹೆದರಿ ಇಷ್ಟು ದಿನ ಯಾರಿಗೂ ಹೇಳಿರಲಿಲ್ಲ. ನನ್ನ ಜೊತೆ ಸತ್ಯ ಸಾಯಬಾರದೆಂದು ವಿಡಿಯೋ ರೆಕಾರ್ಡ್ ಮಾಡುತ್ತಿದ್ದೇನೆ. ನೀವ್ಯಾರು ನಂಬುವುದಿಲ್ಲ, ಹಾಗಾಗಿ ನಾನು ಏನು ಮಾಡಬೇಕು ಅದನ್ನು ಮಾಡಿದ್ದೀನಿ ಎಂದು ಹೇಳಿದ್ದಾನೆ.

## ಎನ್ಯುಮರೇಷನ್ ಅರ್ಜಿ ಭರ್ತಿ ವೇಳೆ ವಾಗ್ವಾದ

**ಹಾಸನ:** ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಗಣತಿ ನಮೂನೆ ಭರ್ತಿ ಮಾಡುವ ವೇಳೆ ಗೊಂದಲದಿಂದ ಮಹಿಳಾ ಬಿಎಲ್‌ಓ ಹಾಗು ವ್ಯಕ್ತಿ ನಡುವೆ ವಾಗ್ವಾದ ನಡೆದ ಘಟನೆ ನಗರದ ಎಂ.ಜಿ.ರಸ್ತೆಯಲ್ಲಿ ನಡೆದಿದೆ.

ಎನ್ಯುಮರೇಷನ್ ಫಾರಂ ಭರ್ತಿ ವೇಳೆ ವ್ಯಕ್ತಿಯ ಹೆಸರಿನ ಬದಲು ಅವರ ತಂದೆಯ ಹೆಸರು ದಾಖಲು ಮಾಡಿದ್ದಾರೆಂದು ಆರೋಪಿಸಿ ಬಿಎಲ್‌ಓಗೆ ಕರೆ ಮಾಡಿ ವ್ಯಕ್ತಿ ಪ್ರಶ್ನಿಸಿದ್ದಾರೆ. ನಂತರ ಮಹಿಳಾ ಬಿಎಲ್‌ಓ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದು, ಅದರಿಂದ ರೊಚ್ಚಿಗೆದ್ದ ಶಿಕ್ಷಕಿ ವ್ಯಕ್ತಿಯನ್ನು ಹುಡುಕಿಕೊಂಡು ನಗರದ ಎಂ.ಜಿ.ರಸ್ತೆಗೆ ಬಂದಿದ್ದಾರೆ. ಸಾರ್ವಜನಿಕರ ಎದುರೇ ವ್ಯಕ್ತಿಯನ್ನು ತರಾಟೆಗೆ ತೆಗೆದುಕೊಂಡಿದ್ದು, ಈ ವೇಳೆ ಇಬ್ಬರ ನಡುವೆ ತೀವ್ರ ವಾಗ್ವಾದ ನಡೆದಿದೆ. ಬಿಎಲ್‌ಓ ಹಾಗು ವ್ಯಕ್ತಿ ನಡುವೆ ವಾಗ್ವಾದದ ವಿಡಿಯೋ ಮೊಬೈಲ್‌ನಲ್ಲಿ ಸೆರೆಯಾಗಿದೆ.

## ಮನೆ ಬೀಗ ಮುರಿದು ಹಣ ಕಳವು

**ಹಾಸನ:** ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಖಚಿತಪಡಿಸಿಕೊಂಡು ಒಳನುಗ್ಗಿರುವ ಕಳ್ಳರು ಬೀರುವಿನಲ್ಲಿಟ್ಟಿದ್ದ 1.50 ಲ. ರೂ. ನಗದು ಹಾಗು 5 ಗ್ರಾಂ ತೂಕದ ಚಿನ್ನಾಭರಣ ಕದ್ದಿರುವ ಘಟನೆ ಪೆನ್ಷನ್ ಮೊಹಲ್ಲಾದಲ್ಲಿ ನಡೆದಿದೆ.

ಮುಬಾರಕ್ ಎಂಬುವವರ ಮನೆಯಲ್ಲಿ ಜು.30ರ ರಾತ್ರಿ ಕಳ್ಳತನವಾಗಿದೆ. ತಂದೆಯ ಆರೋಗ್ಯದಲ್ಲಿ ಏರುಪೇರು ಉಂಟಾಗಿದ್ದರಿಂದ ಅವರು ಮನೆಗೆ ಬೀಗ ಹಾಕಿಕೊಂಡು ಹಿಮ್ಸ್ ಆಸ್ಪತ್ರೆಗೆ ಬಂದಿದ್ದರು. ಮಾರನೇ ದಿನ ಬೆಳಿಗ್ಗೆ ಮನೆಗೆ ಹೋದಾಗ ಬಾಗಿಲು ಒಡೆದಿರುವುದು ಗೊತ್ತಾಗಿದೆ. ಬಲವಾದ ಆಯುಧದಿಂದ ಬೀಗ ಮುರಿದಿರುವ ಕಳ್ಳರು ಬೀರುವಿನಲ್ಲಿಟಿದ್ದ ಹಣ ಹಾಗು ಚಿನ್ನಾಭರಣ ದೋಚಿದ್ದಾರೆ.

## ಇನ್ನೊಬ್ಬರನ್ನು ಪ್ರಶ್ನಿಸುವ ಪತ್ರಕರ್ತ ಶುದ್ಧನಾಗಿರಬೇಕು

» ಮೊದಲನೇ ಪುಟದಿಂದ

ಕಿರುಕಥೆಗಳನ್ನು ಬರೆಯುವುದನ್ನು ಕಲಿಯಬೇಕು. ಕಿರುಕಥೆ ಬರೆದು ಗೆದ್ದರೆ ನಿಮ್ಮಂತಹ ದೊಡ್ಡ ಬರಹಗಾರ ಮತ್ತೊಬ್ಬರಿಲ್ಲ ಎಂದರು.

ರವಿ ಬೆಳಗೆರೆ ಅವರು ಕನ್ನಡ ಪತ್ರಿಕೋದ್ಯಮ ವ್ಯಾಕರಣ ಹದಗೆಡಿಸಿದರು ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಓದುಗರನ್ನು ಹಿಡಿದಿಟ್ಟುಕೊಳ್ಳಲು ಮೊನಚಾದ ಭಾಷೆ ಬಳಸುವುದು ಅವರಿಗೆ ಕರಗತವಾಗಿತ್ತು. ಅದನ್ನು ತಪ್ಪು ಎಂದು ಹೇಳುವುದಿಲ್ಲ. ಪತ್ರಿಕೋದ್ಯಮ ಉದ್ಯಮ ಆಗಬಾರದು, ವಸೂಲಿಗಾಗಿ ಪತ್ರಿಕೆ ಆರಂಭಿಸುವುದು ಕೆಟ್ಟ ಸಂಸ್ಕೃತಿ, ಖಂಡನೀಯ ಎಂದರು.

ಕೆಯೂಡಬ್ಲ್ಯೂಜೆ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಅವರು ಮಾತನಾಡಿ, ರವಿ ಬೆಳಗೆರೆ ಅವರು ಎಲ್ಲಾ ಸ್ಥರದಲ್ಲಿ ದೊಡ್ಡವರಾದರೂ ಕಿರಿಯರ ಬಗ್ಗೆ ಪ್ರೀತಿ ಹೊಂದಿದ್ದರು. ಹಾಸನದಲ್ಲಿ ರಚನೆಯಾದ ಜನಸ್ಪಂದನ ವೇದಿಕೆಯ ಕಾರ್ಯಕ್ರಮಕ್ಕೆ ರವಿ ಬೆಳಗೆರೆ ಅತಿಥಿಯಾಗಿ ಬಂದಿದ್ದರು. ಕನ್ನಡ ಪತ್ರಿಕೋದ್ಯಮದಲ್ಲಿ ಅವರು ಅಚ್ಚಳಿಯದ ಸಾಧನೆ ಮಾಡಿದ್ದಾರೆ. ಎಸ್.ಎಲ್.ಭೈರಪ್ಪ, ರವಿ ಬೆಳಗೆರೆ ಕನ್ನಡ ಸಾಹಿತ್ಯ ಲೋಕದ ಮೇರು ಪರ್ವತ ಎಂದರು.



ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ ಅವರು ಮಾತನಾಡಿ, ಸಾಂಸ್ಕೃತಿಕ ಸಮಿತಿ ನಡೆಸುತ್ತಿರುವ ಏಳನೇ ಕಾರ್ಯಕ್ರಮ ಇದಾಗಿದೆ. ಸಮಿತಿಯ ಎಲ್ಲಾ ಪದಾಧಿಕಾರಿಗಳು ಉತ್ತಮ ಕೆಲಸ ಮಾಡುತ್ತಿದ್ದಾರೆ. ಅದರಿಂದ ಪತ್ರಿಕೋದ್ಯಮ ವೃತ್ತಿಗೆ ಪೂರಕ ಮಾರ್ಗದರ್ಶನ ಸಿಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ರವಿ ಬೆಳಗೆರೆ ಅವರಿಗೂ ಹಾಸನಕ್ಕೂ ಅವಿನಾಭಾವ ನಂಟಿದೆ. ಉಪನ್ಯಾಸಕರಾಗಿ ಕೆಲವು ವರ್ಷ ಕೆಲಸ ಮಾಡಿದ್ದ ಅವರು ಜನಮಿತ್ರ ಪತ್ರಿಕೆಯಲ್ಲೂ ಸೇವೆ ಸಲ್ಲಿಸಿದ್ದಾರೆ. ಕೇವಲ 300 ರೂ. ಗಳೊಂದಿಗೆ ಬೆಂಗಳೂರಿಗೆ ಬಂದ ಅವರು ನಾಡು ಮೆಚ್ಚಿದ ಲೇಖಕ ಆಗಿದ್ದು ರೋಚಕ. ಈ ಸಾಧನೆಯ ಹಿಂದೆ ಸಾಕಷ್ಟು ಪರಿಶ್ರಮ, ತಾಳ್ಮೆ ಹಾಗು ಛಲ ಇತ್ತು ಎಂದು ವಿವರಿಸಿದರು.

ಸಾಂಸ್ಕೃತಿಕ ಸಮಿತಿ ಸಂಚಾಲಕ ಪ್ರಸನ್ನಕುಮಾರ್ ಹಾಡ್ಲಹಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಿತಿ ಸದಸ್ಯ ಮಲ್ಲಿಕಾರ್ಜುನ ಕೊಚ್ಚರಗಿ ಕಾರ್ಯಕ್ರಮ ನಿರೂಪಿಸಿದರು. ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಕೆ.ಪಿ.ಎಸ್. ಪ್ರಮೋದ್, ಜಿಲ್ಲಾ ಉಪಾಧ್ಯಕ್ಷ ಜಿ.ಪ್ರಕಾಶ್, ಖಜಾಂಚಿ ಪ್ರಕಾಶ್ ಬೆಳವಾಡಿ ಹಾಗು ವಿದ್ಯಾರ್ಥಿಗಳಿದ್ದರು.

# ವೃತ್ತಿ ಜೀವನ ಸಾರ್ಥಕವಾಗಲು ಸಮಾಜದ ಋಣ ತೀರಿಸಿ

• ಪ್ರಜೋದಯ ವರದಿ

**ಅರಕಲಗೂಡು:** ಕೇವಲ ಹಣ ಗಳಿಸುವುದು ಅಥವಾ ತಿಂಗಳ ಕೊನೆಯಲ್ಲಿ ಸಂಬಳ ಪಡೆಯುವುದು ಜೀವನದ ಗುರಿಯಾಗಬಾರದು. ಸಮಾಜಕ್ಕೆ ಸಲ್ಲಿಸಬೇಕಾದ ಸೇವೆಯನ್ನು ನೆನಪಿಸಿಕೊಂಡರೆ ಮಾತ್ರ ವೃತ್ತಿ ಜೀವನ ಸಾರ್ಥಕವಾಗುತ್ತದೆಂದು ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಅವರು ಸಲಹೆ ನೀಡಿದರು.

ಪಟ್ಟಣದ ಲಕ್ಷ್ಮೀ ಕಲ್ಯಾಣ ಮಂಟಪದಲ್ಲಿ ತಾಲ್ಲೂಕು ಮಹಿಳಾ ಒಕ್ಕಲಿಗರ ಸಂಘದಿಂದ ಶನಿವಾರ ನಡೆದ ಕೆಂಪೇಗೌಡ ಜಯಂತ್ಯೋತ್ಸವದಲ್ಲಿ ಆಶೀರ್ವಚನ ನೀಡಿದ ಅವರು, ಸರ್ಕಾರಿ ಹುದ್ದೆಗೆ ಆಯ್ಕೆಯಾಗಿ ಉನ್ನತ ಸ್ಥಾನಗಳನ್ನು ಪಡೆದಾಗ ತಂದೆ-ತಾಯಿ ನಿಮ್ಮನ್ನು ಬೆಳೆಸಲು ಪಟ್ಟ ಕಷ್ಟಗಳು, ಅವರ ಕಣ್ಣೀರು ಮತ್ತು ನಿಮ್ಮ ಸಮಾಜದ ಋಣ ನೆನಪಿರಬೇಕು. ನಾಡಪ್ರಭು ಕೆಂಪೇಗೌಡರ ಆದರ್ಶಗಳು ಸಮಾಜಕ್ಕೆ ಮಾದರಿಯಾಗಿದ್ದು ಅದನ್ನು ಬದುಕಿನಲ್ಲಿ ಅಳವಡಿಸಿ ಕೊಂಡು ಮುನ್ನಡೆಯಬೇಕೆಂದರು.



ಅಧ್ಯಕ್ಷತೆ ವಹಿಸಿದ್ದ ಶಾಸಕ ಎ. ಮಂಜು ಅವರ ಮಾತನಾಡಿ, ದೇಶದ ಪ್ರಗತಿಯಲ್ಲಿ ಎಲ್ಲಾ ಸಮುದಾಯಗಳ ಕೊಡುಗೆ ಇದ್ದು, ಶಿಕ್ಷಣ, ಸಾಧನೆ ಮತ್ತು ಒಗ್ಗಟ್ಟಿನ ಮೂಲಕ ಸಮಾಜವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವ ಹೊಣೆಗಾರಿಕೆ ಎಲ್ಲರದ್ದಾಗಿದೆ ಎಂದು ಹೇಳಿದರು.

ನಾಡಿಗೆ ಕೆಂಪೇಗೌಡರ ಕೊಡುಗೆ ಮಹತ್ತರವಾದುದು. ಕೆಂಪೇಗೌಡರ ಪಾಲನೆಯ ಪರಿಣಾಮವಾಗಿ ಇಂದು ಬೆಂಗಳೂರು ಜಾಗತಿಕ ಮಟ್ಟದಲ್ಲಿ ಬೆಳೆದು ನಿಂತಿದೆ. ಯಾವುದೇ ಸಮುದ್ರ ತೀರ ಅಥವಾ ಪ್ರಮುಖ ನದಿಯ ಆಸರೆಯಿಲ್ಲದೆ ಬೆಳೆದ ವಿಶ್ವದ ಏಕೈಕ ಮಹಾನಗರ ಬೆಂಗಳೂರು ಎಂದರೆ ಅದಕ್ಕೆ ಕೆಂಪೇಗೌಡರ ದೂರ ದೃಷ್ಟಿಯೇ ಕಾರಣ. ಪ್ರಜಾಪ್ರಭುತ್ವದ ದೇಗುಲವಾದ ವಿಧಾಸೌಧವನ್ನು ನಿರ್ಮಿಸಿ ನಾಡಿಗೆ ಅದ್ಭುತ ಕೊಡುಗೆ ನೀಡಿದ ಕೆಂಗಲ್ ಹನುಮಂತಯ್ಯನವರಂತಹ ಮಹನೀಯರ ಕೊಡುಗೆಗಳು ಎಂದೆಂದಿಗೂ ಅಮರ. ಕೆಂಪೇಗೌಡರು ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗದೆ ಎಲ್ಲಾ ವರ್ಗದ ಜನರನ್ನು ಒಗ್ಗೂಡಿಸಿ ಪೇಟೆಗಳನ್ನು ನಿರ್ಮಿಸಿ, ಪ್ರತಿಯೊಬ್ಬರಿಗೂ ಕಸುಬು ಮತ್ತು ಬದುಕನ್ನು ಕಟ್ಟಿಕೊಟ್ಟರು. ಅದೇ ಮಾದರಿಯಲ್ಲಿ ಬಾಲಗಂಗಾಧರನಾಥ ಸ್ವಾಮೀಜಿ ರಾಜ್ಯದ ಮೂಲೆ ಮೂಲೆಗಳಲ್ಲಿ ಶಿಕ್ಷಣ, ಅನ್ನದಾಸೋಹ ಹಾಗು ಆರೋಗ್ಯ ಸೇವೆಯ ಮೂಲಕ ಎಲ್ಲಾ ಸಮುದಾಯದ ಜನರನ್ನು ಒಂದೇ ವೇದಿಕೆಯಲ್ಲಿ ತಂದು ನಿಲ್ಲಿಸುವ ಕಾರ್ಯ ಮಾಡಿದರು.

ನಿರ್ಮಲಾನಂದನಾಥ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಶಂಭುನಾಥ ಸ್ವಾಮೀಜಿ ಹಾಗು ಇತರ ಪೂಜ್ಯರು ಈ ಸಾಮಾಜಿಕ ಐಕ್ಯತೆಯ ಕೆಲಸವನ್ನು ಅತ್ಯಂತ ಯಶಸ್ವಿಯಾಗಿ ಮುನ್ನಡೆಸುತ್ತಿದ್ದಾರೆ. ಕೆಂಪೇಗೌಡರ ಆದರ್ಶದಂತೆ ಸಮಾಜದ ಪ್ರತಿಯೊಂದು ವರ್ಗವನ್ನು ಪ್ರೀತಿಯಿಂದ ತಬ್ಬಿಕೊಂಡು, ಜೊತೆಯಲ್ಲಿ ಕರೆದೊಯ್ಯುವ ಕೆಲಸವನ್ನು ನಮ್ಮ ಒಕ್ಕಲಿಗ ಸಮುದಾಯ ಮಾಡಬೇಕಾಗಿದೆ ಎಂದರು.

ಮಹಿಳಾ ಒಕ್ಕಲಿಗರ ಸಂಘದ ಅಧ್ಯಕ್ಷೆ ಹೆಚ್.ಎಸ್.ರಶ್ಮಿಮಂಜು, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ಪಿ.ಶ್ರೀಧರ್‌ಗೌಡ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ರಘುಗೌಡ, ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಪಿ.ನಾರಾಯಣ ಮಾತನಾಡಿದರು. ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಹೊನ್ನವಳ್ಳಿ ಕೆ.ಸತೀಶ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಹನ್ಯಾಳು ಕುಮಾರ್ ಉಪಸ್ಥಿತರಿದ್ದರು. ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯು ಪರೀಕ್ಷೆ ಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಹಾಗು ರಾಜ್ಯ, ರಾಷ್ಟ್ರ ಮಟ್ಟದ ಕ್ರೀಡಾಕೂಟಗಳಲ್ಲಿ ಪಾಲ್ಗೊಂಡು ಸಾಧನೆ ಮಾಡಿದ ವಿದ್ಯಾರ್ಥಿಗಳು ಮತ್ತು ಪೋಷಕರನ್ನು ಗೌರವಿಸಲಾಯಿತು.

# ಕಾವೇರಿ ನೀರಿಗಾಗಿ ತಮಿಳುನಾಡು ಕ್ಯಾತೆ: ಜಿಲ್ಲೆಯಲ್ಲಿ ಆಕ್ರೋಶ

## ಕರ್ನಾಟಕ ರಕ್ಷಣಾ ವೇದಿಕೆಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ತಮಿಳುನಾಡಿಗೆ ನೀರು ಹರಿಸುವಂತೆ ಆದೇಶ ನೀಡಿರುವ ಸಿಡಬ್ಲ್ಯೂಆರ್‌ಸಿ, ಸಿಡಬ್ಲ್ಯೂಎಂಎ ವಿರುದ್ಧ ಕರ್ನಾಟಕ ರಕ್ಷಣಾ ವೇದಿಕೆ ನಾರಾಯಣಗೌಡ ಬಣದ ಕಾರ್ಯಕರ್ತರು ಶನಿವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಖಾಲಿ ಕೊಡಗಳನ್ನು ಮುಂದಿಟ್ಟುಕೊಂಡು ಕಾವೇರಿ ನೀರು ನಿಯಂತ್ರಣ ಸಮಿತಿ, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ತಮಿಳುನಾಡಿಗೆ ನೀರು ಬಿಡಬಾರದು. ಒಂದು ವೇಳೆ ನೀರು ಹರಿಸಿದರೆ ಮುಂದಿನ ದಿನಗಳಲ್ಲಿ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿ, ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.



ಕರವೇ ಜಿಲ್ಲಾಧ್ಯಕ್ಷ ಸಿ.ಡಿ. ಮನುಕುಮಾರ್ ಅವರು ಮಾತನಾಡಿ, ರಾಜ್ಯದಲ್ಲಿ ಈ ವರ್ಷ ಸಮರ್ಪಕ ಮಳೆಯಾಗದೆ ಕಾವೇರಿ ಜಲಾನಯನ ಪ್ರದೇಶದ ಪ್ರಮುಖ ಜಲಾಶಯ ಗಳಾದ ಕೆಆರ್‌ಎಸ್, ಕಬಿನಿ, ಹೇಮಾವತಿ ಜಲಾಶಯಗಳಲ್ಲಿ ನೀರು ಗಣನೀಯವಾಗಿ ಕಡಿಮೆ ಇದೆ. ಇಂತಹ ಸಂಕಷ್ಟದ ಸಂದರ್ಭದಲ್ಲಿ ರಾಜ್ಯದ ಜನ ಕುಡಿಯಲು ಹಾಗು ಕೃಷಿ ಚಟುವಟಿಕೆಗಳಿಗೆ ಅಗತ್ಯವಿರುವ ನೀರನ್ನು ಸಂರಕ್ಷಿಸುವುದು ಸರ್ಕಾರದ ಮೊದಲ ಆದ್ಯತೆಯಾಗಬೇಕು. ರಾಜ್ಯದ ಹಿತಾಸಕ್ತಿಗೆ ಧಕ್ಕೆಯಾಗುವ ರೀತಿಯಲ್ಲಿ ತಮಿಳುನಾಡಿಗೆ ನೀರು ಬಿಡಬಾರದೆಂದು ಆಗ್ರಹಿಸಿದರು.

ಕಾವೇರಿ ವಿಚಾರದಲ್ಲಿ ರಾಜ್ಯ ಸರ್ಕಾರ ದೃಢ ನಿಲುವು ತಾಳಿ, ಕೇಂದ್ರ ಸರ್ಕಾರ ಹಾಗು ಕಾವೇರಿ ಪ್ರಾಧಿಕಾರಗಳ ಮುಂದೆ ನೀರಿನ ವಾಸ್ತವ ಪರಿಸ್ಥಿತಿಯನ್ನು ಸಮರ್ಥವಾಗಿ ಮಂಡಿಸ ಬೇಕು. ಸಿಡಬ್ಲ್ಯೂ ಆರ್‌ಸಿ-ಸಿಡಬ್ಲ್ಯೂಎಂಎ ಆದೇಶದ ವಿರುದ್ಧ ತಕ್ಷಣ ಮೇಲ್ಮನವಿ ಸಲ್ಲಿಸಿ, ರಾಜ್ಯದ ಜಲಾಶಯಗಳ ನೀರಿನ ಪ್ರಮಾಣ, ಮಳೆ ಕೊರತೆ, ಕುಡಿಯುವ ನೀರಿನ ಅವಶ್ಯಕತೆ ಹಾಗು ಕೃಷಿ ಬೇಡಿಕೆ ಕುರಿತು ವೈಜ್ಞಾನಿಕ ಅಂಕಿ-ಅಂಶ ಮಂಡಿಸಬೇಕು. ಅಗತ್ಯವಿದ್ದಲ್ಲಿ ಸುಪ್ರೀಂ ಕೋರ್ಟ್ ಸೇರಿ ದೇಶದ ಎಲ್ಲಾ ಕಾನೂನು ವೇದಿಕೆಗಳಲ್ಲಿ ಪ್ರಬಲ ವಾದ ಮಂಡಿಸಬೇಕೆಂದು ಒತ್ತಾಯಿಸಿದರು.

ಕುಡಿಯುವ ನೀರು ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕಾಗಿದ್ದು, ಕಾವೇರಿ ಜಲಾನಯನ ಪ್ರದೇಶದ ಎಲ್ಲಾ ನಗರ, ಪಟ್ಟಣ ಹಾಗು ಗ್ರಾಮಗಳಿಗೆ ಅಗತ್ಯವಿರುವ ಕುಡಿಯುವ ನೀರನ್ನು ಮೊದಲು ನೀಡಬೇಕು. ಕೃಷಿಗೆ ಅಗತ್ಯವಿರುವ ನೀರನ್ನು ಖಚಿತಪಡಿಸಿ, ನಾಡಿಗೆ ಸಂಕಷ್ಟ ಎದುರಾಗದಂತೆ ಗಮನ ಹರಿಸಬೇಕು. ಬರಗಾಲ ಅಥವಾ ಮಳೆ ಕೊರತೆಯಂತಹ ಸಂಕಷ್ಟದ ಸಂದರ್ಭಗಳಲ್ಲಿ ರಾಜ್ಯಗಳ ನಡುವೆ ನೀರಿನ ಹಂಚಿಕೆಗೆ ಅನುಸರಿಸಬೇಕಾದ ಶಾಶ್ವತ ಹಾಗೂ ವೈಜ್ಞಾನಿಕ ಸಂಕಷ್ಟ ಸೂತ್ರ ರೂಪಿಸುವಂತೆ ಕೇಂದ್ರದ ಮೇಲೆ ಒತ್ತಡ ಹೇರಬೇಕೆಂದು ಆಗ್ರಹಿಸಿದರು.

ರಾಜ್ಯದ ಹಿತಾಸಕ್ತಿಗೆ ವಿರುದ್ಧ ಯಾವುದೇ ನಿರ್ಧಾರ ಕೈಗೊಳ್ಳುವ ಮೊದಲು ಸರ್ವಪಕ್ಷ ಸಭೆ ಕರೆದು ಚರ್ಚಿಸಬೇಕು. ನೀರಾವರಿ, ಕಾನೂನು ತಜ್ಞರು, ಕನ್ನಡಪರ ಸಂಘಟನೆ ಹಾಗೂ ರೈತ ಸಂಘಟನೆಗಳೊಂದಿಗೆ ಸಮಾಲೋಚನೆ ನಡೆಸಿದ ನಂತರವೇ ಮುಂದಿನ ನಿರ್ಧಾರ ಕೈಗೊಳ್ಳ ಬೇಕೆಂದು ಮನವಿ ಮೂಲಕ ಒತ್ತಾಯಿಸಿದರು.

ಕರವೇ ಮುಖಂಡರಾದ ತನುಗೌಡ, ಶಿವಕುಮಾರ್, ಶಿವಣ್ಣಗೌಡ, ಖಾದರ್, ಓಹಿಲೇಶ್, ಗಗನಗೌಡ, ಅಭಿಗೌಡ, ಮಧು ಕರಡೇವು, ಪ್ರೀತಂ, ಚಂದ್ರಶೇಖರ್, ನಟರಾಜ್, ಸೋಮ ಶೇಖರ್, ಕಿರಣ್ ಕುಮಾರ್, ಶ್ರೀನಿವಾಸ್, ಪ್ರಕಾಶ್, ಆಶಾ, ವೀಣಾ ಭಾಗವಹಿಸಿದ್ದರು.

## ಬದುಕಿನ ದಾರಿ ಹೇಳಿಕೊಟ್ಟ ಗುರುವಿಗೆ ಗೌರವಿಸಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಗುರು ಸಮಾಜದಲ್ಲಿ ಸದಾ ಗುರುವಾಗಿಯೇ ಇರಬೇಕು. ಬದುಕಿನ ದಾರಿ ಹೇಳಿಕೊಟ್ಟ ವಿದ್ಯಾದಾತರನ್ನು ಜೀವನದ ಕೊನೆಯ ಕ್ಷಣದ ವರೆಗೆ ಗೌರವಿಸಬೇಕೆಂದು ನಿವೃತ್ತ ಶಿಕ್ಷಣಾಧಿಕಾರಿ ಡಾ.ಜೆ.ಬಿ. ತಮ್ಮಣ್ಣಗೌಡ ಅವರು ಹೇಳಿದರು.



ತಾಲ್ಲೂಕಿನ ಜಿನ್ನೇನಹಳ್ಳಿ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕ ಓಂಕಾರ ಮೂರ್ತಿ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, ಗುರು ಎರಡು ಮಾತ್ರೆಯ ಅಕ್ಷರ ವಾದರೆ ಲಘು ಒಂದು ಮಾತ್ರೆಯ ಅಕ್ಷರ. ಗುರುವಿನಿಂದ ಗೌರವ ಬರುತ್ತದೆ, ಲಘುವಿನಿಂದ ಲಾಘವ ಬರುತ್ತದೆ. ಲಾಘವ ಎಂದರೆ ಗಟ್ಟಿ ಇಲ್ಲದೆ ಇರುವುದು ಅಂದರೆ ಟೊಳ್ಳಾದ ಎಂದರ್ಥ. ಹಾಗಾಗಿ ಗಟ್ಟಿತನವಿರುವ ಗುರುವಿಗೆ ಸಮಾಜದಲ್ಲಿ ಎಂದೆಂದೂ ಗೌರವ ಇರುತ್ತದೆಂದರು.

ಎಲ್ಲರೂ ಕಲಿತ ಶಾಲೆಯನ್ನು ಪ್ರೀತಿಸಬೇಕು. ಶಾಲೆ ಅಕ್ಷರ ಸಂಪತ್ತನ್ನು ಕೊಡುವ ಕೇಂದ್ರ. ಅಕ್ಷರ ಸಂಪತ್ತು ಎಂದರೆ ಮೂರಕ್ಷರದ ಪದವೇ ತಿಳಿಸುವಂತೆ ನಾಶವಾಗದೆ ಇರುವಂತದ್ದು. ಈ ನಾಶವಾಗದೆ ಇರುವ ಸಂಪತ್ತನ್ನು ಶಾಲೆ ಕೊಡುವುದರಿಂದ ಶಾಲೆಗೆ ಬೆಲೆ ಕಟ್ಟಲು ಆಗುವುದಿಲ್ಲ. ಅಂತಹ ಶಾಲೆಯನ್ನು ಕಟ್ಟುವ, ಬೆಳೆಸುವ ಮತ್ತು ಉಳಿಸುವ ಮನೋಭಾವ ಸಮಾಜದ ಸರ್ವ ಸದಸ್ಯರಲ್ಲೂ ಇರಬೇಕೆಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸತೀಶ್ ಅವರು ಮಾತನಾಡಿ, ಶಿಕ್ಷಣ ಸೇವೆ ಪವಿತ್ರವಾದದ್ದು ಅಂತೆಯೇ ಶಿಕ್ಷಕ ವೃತ್ತಿಯೂ ಪವಿತ್ರವಾದದ್ದು, ಶಿಕ್ಷಕರು ತಮ್ಮ ವೃತ್ತಿಯಲ್ಲಿ ಪ್ರಾಮಾಣಿಕವಾಗಿ ಶ್ರದ್ಧೆಯಿಂದ ಸೇವೆ ಮಾಡಿದರೆ ಶಿಷ್ಯರಿಂದ, ಪೋಷಕರಿಂದ ಮತ್ತು ಸಮಾಜದಿಂದ ಗೌರವ ಸಿಗುತ್ತದೆಂದರು.

ನಿವೃತ್ತ ಶಿಕ್ಷಕ ಓಂಕಾರಮೂರ್ತಿ ಅವರು ಮಾತನಾಡಿ, ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ಸಹಕರಿಸಿದ ಎಲ್ಲರಿಗೂ ಧನ್ಯವಾದ ಅರ್ಪಿಸಿದರು.

ಅಕ್ಷರ ದಾಸೋಹ ಅಧಿಕಾರಿ ಉಮಾಶಂಕರ್, ಶಿಕ್ಷಣ ಸಂಯೋಜಕ ಶ್ರೀನಿವಾಸ್ ಮಾತ ನಾಡಿದರು. ಕೆಜಿಐಡಿ ಅಧಿಕಾರಿ ಕುಮಾರ್, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪುರುಷೋತ್ತಮ್, ಇಂಜಿನೀಯರ್ ದರ್ಶನ್ ಭಾಗವಹಿಸಿದ್ದರು. ಶಿಕ್ಷಕಿ ಲತಾ ಸ್ವಾಗತಿಸಿದರು. ಮಂಜುನಾಥ್ ಕಾರ್ಯಕ್ರಮ ನಿರೂಪಿಸಿದರು.

## ಅರೇಹಳ್ಳಿ ಭಾಗಕ್ಕೆ ಭುವನೇಶ್ವರಿ ಕಾಡಾನೆ ಗುಂಪು ಲಗ್ಗೆ

• ಪ್ರಜೋದಯ ವರದಿ




**ಅರೇಹಳ್ಳಿ:** ಕೆಲ ತಿಂಗಳಿನಿಂದ ಕಣ್ಮರೆಯಾಗಿದ್ದ ಕಾಡಾನೆಗಳ ಹಿಂಡು ಮತ್ತೆ ಅರೇಹಳ್ಳಿ ಹೋಬಳಿ ವ್ಯಾಪ್ತಿಯ ಲಿಂಗಾಪುರ ಗ್ರಾಮದಲ್ಲಿ ಕಾಣಿಸಿಕೊಂಡು ಸ್ಥಳೀಯರಲ್ಲಿ ಆತಂಕ ಮೂಡಿಸಿದೆ. ಮನೆಯೊಂದರ ಸಿಸಿ ಕ್ಯಾಮೆರಾದಲ್ಲಿ ಕಾಡಾನೆಗಳ ಚಲನವಲನ ಸೆರೆಯಾಗಿದೆ.

ಮಧ್ಯರಾತ್ರಿ ಸುಮಾರು 12 ಗಂಟೆ ವೇಳೆಗೆ ಭುವನೇಶ್ವರಿ ಎಂದು ಕರೆಯಲ್ಪಡುವ ಸುಮಾರು ಏಳು ಕಾಡಾನೆಗಳ ಹಿಂಡು ಗ್ರಾಮದ ಸಮೀಪದ ಜಮೀನುಗಳಿಗೆ ನುಗ್ಗಿ ಕಾಫಿ, ಬಾಳೆ, ಹಲಸು ಬೆಳೆಗಳಿಗೆ ಹಾನಿ ಉಂಟುಮಾಡಿದೆ. ಇದೇ ವೇಳೆ ಹಿಂಡಿನಲ್ಲಿದ್ದ ಒಂಟಿ ಕಾಡಾನೆಯೊಂದು ಗ್ರಾಮದ ಚಂದ್ರವತಿ ಅವರ ಮನೆಯ ಅಂಗಳಕ್ಕೂ ನುಗ್ಗಿ ದಾಂಧಲೆ ನಡೆಸಿದೆ.

ಮನೆಯ ಸಾಕು ನಾಯಿಗಳು ಜೋರಾಗಿ ಬೊಗಳುತ್ತಿದ್ದಂತೆ ರೊಚ್ಚಿಗೆದ್ದ ಕಾಡಾನೆ ನಾಯಿ ಯತ್ತ ಮುನ್ನುಗ್ಗಿ ಬೆನ್ನಟ್ಟಲು ಯತ್ನಿಸಿತು. ಅಪಾಯವನ್ನು ಅರಿತ ನಾಯಿ ಕ್ಷಣಾರ್ಧದಲ್ಲೇ ತಪ್ಪಿಸಿಕೊಂಡ ಪರಿಣಾಮ ಯಾವುದೇ ಪ್ರಾಣಹಾನಿ ಸಂಭವಿಸಲಿಲ್ಲ.

ಸುಮಾರು ಒಂದು ವರ್ಷದ ಬಳಿಕ ಮತ್ತೆ ಕಾಡಾನೆಗಳು ಗ್ರಾಮಕ್ಕೆ ಲಗ್ಗೆ ಇಟ್ಟಿರುವುದು ಗ್ರಾಮಸ್ಥರಲ್ಲಿ ಭಯದ ವಾತಾವರಣ ನಿರ್ಮಿಸಿದೆ. ಕಾಡಾನೆಗಳ ನಿರಂತರ ಸಂಚಾರದಿಂದ ಬೆಳೆ ಹಾನಿಯೂ ಹೆಚ್ಚಾಗುತ್ತಿರುವ ಹಿನ್ನಲೆ ಅರಣ್ಯ ಇಲಾಖೆ ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ಕಾಡಾನೆಗಳನ್ನು ಸುರಕ್ಷಿತವಾಗಿ ಕಾಡಿನತ್ತ ಓಡಿಸಬೇಕು. ಗ್ರಾಮಸ್ಥರ ಜೀವ ಹಾಗೂ ಆಸ್ತಿಪಾಸ್ತಿಗೆ ಸೂಕ್ತ ರಕ್ಷಣೆ ಒದಗಿಸಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

### ತಾ.ಪಂ. ಸಭಾಂಗಣದಲ್ಲಿ ಕೆಡಿಪಿ ಸಭೆ | ಅಧಿಕಾರಿಗಳ ವಿರುದ್ಧ ದೂರುಗಳ ಸುರಿಮಳೆ

# ಕಾಮಗಾರಿ ವಿಳಂಬ ಸಹಿಸುವುದಿಲ್ಲ: ಹೆಚ್.ಕೆ.ಸುರೇಶ್

• ಪ್ರಜೋದಯ ವರದಿ

**ಬೇಲೂರು:** ರಸ್ತೆ, ಕಟ್ಟಡ ಕಾಮಗಾರಿಯಲ್ಲಿ ಯಾವ ಕಾರಣಕ್ಕೂ ವಿಳಂಬ ಸಹಿಸು ವುದಿಲ್ಲ. ನಿಗದಿತ ಸಮಯದಲ್ಲಿ ಕೆಲಸ ಮುಗಿಸಲು ಆಗದಿದ್ದರೆ ಅದಕ್ಕೆ ಸೂಕ್ತ ಕಾರಣ ನೀಡಬೇಕೆಂದು ಶಾಸಕ ಹೆಚ್.ಕೆ.ಸುರೇಶ್ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಶನಿವಾರ ನಡೆದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (ಕೆಡಿಪಿ) ಪ್ರಗತಿ ಪರಿಶೀಲನಾ ಸಭೆಯಲ್ಲಿ ಇಲಾಖಾವಾರು ಅಧಿಕಾರಿಗಳಿಂದ ಮಾಹಿತಿ ಪಡೆದು ಅವರು ಮಾತನಾಡಿದರು.

ಕಾಮಗಾರಿಗಳು ತಾಂತ್ರಿಕ ಮಾನದಂಡಗಳ ಪ್ರಕಾರವೇ ನಡೆಯಬೇಕು. ಆರಂಭದ ದಿನದಿಂದಲೇ ಅಧಿಕಾರಿಗಳು ಸ್ಥಳದಲ್ಲೇ ಮೇಲ್ವಿಚಾರಣೆ ನಡೆಸಬೇಕು. ಲೋಪಗಳು ಕಂಡುಬಂದರೆ ತಕ್ಷಣ ನೋಟೀಸ್ ನೀಡಿ ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳುವ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸುವ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.



**ಗೆಂಡೇಹಳ್ಳಿ ರಸ್ತೆ ವಿಚಾರದಲ್ಲಿ ವಾಗ್ವಾದ**

6 ಕೋ.ರೂ. ವೆಚ್ಚದ ಗೆಂಡೇಹಳ್ಳಿ ರಸ್ತೆ ಕಾಮಗಾರಿ ವಿಳಂಬದ ಕುರಿತು ಮಾತನಾಡಿದ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ ಆನಂದ್ ದೇಶಾಣಿ ಅವರು, ಹೆಚ್ಚುವರಿ ಒಳಚರಂಡಿ ಕಾಮಗಾರಿಯಿಂದ ರಸ್ತೆ ಕೆಲಸ ವಿಳಂಬವಾಗಿದೆ ಎಂದು ದೂರಿದರು. ಮಾಜಿ ಸಚಿವ ಬಿ.ಶಿವರಾಮ್ ಅವರು ಪ್ರಯತ್ನದ ಫಲವಾಗಿ ದೊರೆತ ಅನುದಾನ ಎಂಬ ಕಾರಣಕ್ಕೆ ಉದ್ದೇಶಪೂರ್ವಕವಾಗಿ ವಿಳಂಬ ಮಾಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೇಜವಾಬ್ದಾರಿ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಒಂದು ವಾರದೊಳಗೆ ಕಾಮಗಾರಿ ಪೂರ್ಣಗೊಳಿಸದಿದ್ದರೆ ಕೆಡಿಪಿ ಸದಸ್ಯರು ಹಾಗು ಸಾರ್ವಜನಿಕರೊಂದಿಗೆ ಪಿಡಬ್ಲ್ಯೂಡಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದೆಂದು ಎಚ್ಚರಿಕೆ ನೀಡಿದರು.

ಅದಕ್ಕೆ ಉತ್ತರಿಸಿದ ಶಾಸಕ ಹೆಚ್.ಕೆ.ಸುರೇಶ್ ಅವರು, ಜಾವಗಲ್ ಹಾಗು ಹಳೇಬೀಡು ರಸ್ತೆ ಕಾಮಗಾರಿ ಪೂರ್ಣಗೊಂಡ ಬಳಿಕ ಗೆಂಡೇಹಳ್ಳಿ ರಸ್ತೆ ಕಾಮಗಾರಿ ಆರಂಭಿಸಲಾಗುವುದು. ರಸ್ತೆ ನಿರ್ಮಾಣಕ್ಕೆ ಅಗತ್ಯವಿರುವ ಜಾಗವನ್ನು ಪುರಸಭೆಯಿಂದ ಇನ್ನೂ ಸಂಪೂರ್ಣವಾಗಿ ಹಸ್ತಾಂತರಿಸದಿರುವುದೂ ವಿಳಂಬಕ್ಕೆ ಕಾರಣವಾಗಿದೆ ಎಂದು ಸ್ಪಷ್ಟಪಡಿಸಿದರು.

> ಜನರ ಸಮಸ್ಯೆಗಳಿಗೆ ಅಧಿಕಾರಿಗಳು ತಕ್ಷಣ ಸ್ಪಂದಿಸಬೇಕು. ಇಲಾಖೆಗಳ ನಡುವಿನ ಸಮನ್ವಯದ ಕೊರತೆ ಅಭಿವೃದ್ಧಿಗೆ ಅಡ್ಡಿಯಾಗಬಾರದು. ಕೆಲಸದಲ್ಲಿ ನಿರ್ಲಕ್ಷ್ಯ, ಬೇಜವಾಬ್ದಾರಿ ಅಥವಾ ವಿಳಂಬ ಕಂಡುಬಂದರೆ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು.
> -ಹೆಚ್.ಕೆ.ಸುರೇಶ್, ಶಾಸಕ

**ಅಬಕಾರಿ ಇಲಾಖೆ ವಿರುದ್ಧ ಆರೋಪ**

ಅಬಕಾರಿ ಇಲಾಖೆಯ ಕಾರ್ಯವೈಖರಿಯ ಕುರಿತು ಕೆಡಿಪಿ ಸದಸ್ಯರು ತೀವ್ರ ಅಸಮಾಧಾನ ವ್ಯಕ್ತಪಡಿಸಿ, ತಾಲ್ಲೂಕಿನ ಕೆಲ ಬಾರ್‌ಗಳು ನಿಯಮ ಉಲ್ಲಂಘಿಸಿ ಬೆಳಿಗ್ಗೆಯೇ ಕಾರ್ಯಾರಂಭ ಮಾಡುತ್ತಿವೆ. ಇಲಾಖೆಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಆರೋಪಿಸಿದರು. ಸದಸ್ಯರು ಸಭೆಯಲ್ಲೇ ಧರಣಿ ನಡೆಸಿ ಕ್ರಮಕ್ಕೆ ಒತ್ತಾಯಿಸಿದರು.

ಶಾಸಕ ಹೆಚ್.ಕೆ.ಸುರೇಶ್ ಮಧ್ಯ ಪ್ರವೇಶಿಸಿ, ಸಾಕ್ಷ್ಯಾಧಾರಗಳೊಂದಿಗೆ ಮಾಹಿತಿ ನೀಡಿದರೆ ತಪ್ಪಿತಸ್ಥ ಅಧಿಕಾರಿಗಳ ಅಮಾನತಿಗೆ ಶಿಫಾರಸ್ಸು ಮಾಡುತ್ತೇನೆಂದು ಭರವಸೆ ನೀಡಿದರು.

ಕೆಡಿಪಿ ಸದಸ್ಯ ಚೇತನ್ ಸಿ.ಗೌಡ ಅವರು ಮಾತನಾಡಿ, ತಾಲ್ಲೂಕಿನಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಮಾನವ-ಆನೆ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಒತ್ತಾಯಿಸಿದರು. ಆನೆ ದಾಳಿಯಿಂದ ಮೃತಪಟ್ಟವರ ಕುಟುಂಬಗಳಿಗೆ ವಿಶೇಷ ಪರಿಹಾರ, ಸರ್ಕಾರಿ ಉದ್ಯೋಗ, ಮಕ್ಕಳ ಶಿಕ್ಷಣದ ಸಂಪೂರ್ಣ ವೆಚ್ಚ, ಬೆಳೆ ಹಾನಿಗೆ ತ್ವರಿತ ಪರಿಹಾರ, ಅರಣ್ಯ ಇಲಾಖೆ ಗಸ್ತು, ಸೋಲಾರ್ ಫೆನ್ಸಿಂಗ್ ಹಾಗು ಕಂದಕಗಳ ದುರಸ್ತಿ ಸೇರಿ ಹಲವು ಬೇಡಿಕೆಗಳನ್ನು ಪ್ರಸ್ತಾಪಿಸಿದರು.

ಅರಣ್ಯಾಧಿಕಾರಿ ಯತೀಶ್ ಅವರು ಮಾತನಾಡಿ, ತಾಲ್ಲೂಕಿನಲ್ಲಿ ಇದುವರೆಗೆ 13 ಮಂದಿ ಕಾಡಾನೆ ದಾಳಿಗೆ ಬಲಿಯಾಗಿದ್ದು, ಸುಮಾರು 48 ಕಾಡಾನೆಗಳು ಐದು ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಸಂಚರಿಸುತ್ತಿವೆ. ಕಣಗುಪ್ಪೆ ಗ್ರಾಮದಲ್ಲಿಯೇ ನಾಲ್ವರು ಮೃತಪಟ್ಟಿದ್ದಾರೆಂದು ಮಾಹಿತಿ ನೀಡಿದರು.

ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ, ಆಡಳಿತಾಧಿಕಾರಿ ಡಾ.ಬಿ.ಕೆ.ರಮೇಶ್, ಕಾರ್ಯನಿರ್ವಾಹಕ ಅಧಿಕಾರಿ ಸತೀಶ್, ಪೊಲೀಸ್ ಇನ್ಸ್‌ಪೆಕ್ಟರ್ ರೇವಣ್ಣ ಮತ್ತಿತರರು ಉಪಸ್ಥಿತರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK